ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

# ಕನ್ನಡ ಭಾರತಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ನೊಂದವರ ನೈಜ ಕನ್ನಡಿ

ಸಂಪುಟ : 12 ಸಂಚಿಕೆ : 196

27-1-2025 ಮಂಗಳವಾರ


₹3 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 12 ISSUE : 196

## ಸಂಸದರಿಂದ ವಾಚನಾಲಯ ಉದ್ಘಾಟನೆ



ದಾವಣಗೆರೆ: ಜಿಲ್ಲಾಡಳಿತ ಭವನದಲ್ಲಿ ಸಾರ್ವಜನಿಕರಿಗಾಗಿ ಆರಂಭಿಸಿರುವ ವಾಚನಾಲಯದ ಉದ್ಘಾಟನೆಯನ್ನು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ನೆರವೇರಿಸಿದರು. ಈ ವೇಳೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಜಿ.ಪಂ. ಸಿಇಓ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

## ಜೈನ್ ವಿದ್ಯಾಲಯದಲ್ಲಿ ಗಣರಾಜ್ಯೋತ್ಸವ




ದಾವಣಗೆರೆ: 76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ನಗರದ ಜೈನ್ ವಿದ್ಯಾಲಯದ ಸ್ಟೇಟ್, ಸಿ.ಬಿ.ಎಸ್.ಇ., ಹಾಗೂ ಪಿ.ಯು. ಕಾಲೇಜುಗಳ ವಿಭಾಗಗಳಿಂದ ಧ್ವಜಾರೋಹಣ ನಡೆಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆ ಅಧ್ಯಕ್ಷ ಹೆಚ್. ರಮೇಶಕುಮಾರ್ , ಕಾರ್ಯದರ್ಶಿ ಜೆ. ರಮೇಶಕುಮಾರ್, ಆಡಳಿತ ಮಂಡಳಿಯ ಸದಸ್ಯರು, ಮುಖ್ಯೋಪಾಧ್ಯಾಯರು, ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಆಸ್ಪತ್ರೆಯಿಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಡಿಸ್ಚಾರ್ಜ್

**ಬೆಳಗಾವಿ:** ಕಾರು ಅಪಘಾತದಲ್ಲಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಇಂದು ಭಾನುವಾರ ಬೆಳಗ್ಗೆ ಆಸ್ಪತ್ರೆಯಿಂದ ಬಿಡಗಡೆಯಾಗಿದ್ದಾರೆ. ಅವರ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆ ಕಂಡುಬಂದಿದ್ದು, ಕಳೆದ 13 ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರಿಗೆ ಹಾಗೂ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಕಳೆದ ಜನವರಿ 14 ರ ಬೆಳಗಿನ ಜಾವ ಬೆಳಗಾವಿ ಸಮೀಪ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಅವರ ಸಹೋದರ ಇದ್ದ ಕಾರು ಅಪಘಾತಕ್ಕೀಡಾಗಿತ್ತು. ಸಚಿವೆ ಬೆನ್ನಿಗೆ ಪೆಟ್ಟಾಗಿ ಆಸ್ಪತ್ರೆಗೆ ದಾಖಲಾಗಿ ಇಷ್ಟು ದಿನ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯಿಂದ ಬಿಡುಗಡೆಯಾದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಲಕ್ಷ್ಮೀ ಹೆಬ್ಬಾಳ್ಕರ್, ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ.

### 76 ನೇ ಗಣರಾಜ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್

# ಸಂವಿಧಾನವೇ' ನಮ್ಮ ರಾಷ್ಟ್ರದ ಸರ್ವೋಚ್ಚ ಕಾನೂನು, ಎಲ್ಲರೂ ಗೌರವ ನೀಡಿ ಪಾಲನೆ ಮಾಡಬೇಕು

**ದಾವಣಗೆರೆ:** ಸಂವಿಧಾನವೇ' ನಮ್ಮ ರಾಷ್ಟ್ರದ ಸರ್ವೋಚ್ಚ ಕಾನೂನು, ಅದಕ್ಕೆ ಎಲ್ಲರೂ ಗೌರವಿಸಬೇಕು ಮತ್ತು ಅದರ ನಿಯಮಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ್ ಹೇಳಿದರು.

ಭಾನುವಾರ (ಜ.26)ಜಿಲ್ಲಾಡಳಿತದಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ 76 ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಪಥಸಂಚಲನದಲ್ಲಿ ವಿವಿಧ ತುಕುಡಿಗಳಿಂದ ಗೌರವ ವಂದನೆ ಸ್ವೀಕರಿಸಿ ತಮ್ಮ ಸಂದೇಶದಲ್ಲಿ ಮಾತನಾಡಿದರು.

ಬುದ್ಧ, ಬಸವ, ಅಂಬೇಡ್ಕರ್ ಅವರ ಸದಾಶಯದಂತೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ತತ್ವದಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ದೊರಕಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರವು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಈ ಬಾರಿ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜಿಲ್ಲೆಯ ಜೀವನಾಡಿ ಭದ್ರಾ ಜಲಾಶಯ ತುಂಬಿರುವುದರಿಂದ ರೈತಾಪಿ ವರ್ಗದಲ್ಲಿ ಹರ್ಷ ಮನೆಮಾಡಿದೆ. ರೈತರು ಬೇಸಿಗೆ ಬೆಳೆಯ ಸಿದ್ಧತೆಯಲ್ಲಿ ತೊಡಗಿದ್ದಾರೆ. ಇದು ಅತ್ಯಂತ ಸಂತೋಷದ ವಿಷಯವಾಗಿದೆ ಎಂದರು.

ಜನಸಾಮಾನ್ಯರ ಬದುಕಿಗೆ ಆರ್ಥಿಕ ಸಬಲತೆಯೊಂದಿಗೆ, ಸಾಮಾಜಿಕ ಗೌರವ ತಂದುಕೊಡುವ ದೃಷ್ಟಿಯಿಂದ ಸರ್ಕಾರ 5 ಗ್ಯಾರಂಟಿ ಯೋಜನೆಗಳ ಜೊತೆಗೆ ಹಲವಾರು ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾಗೊಳಿಸುತ್ತಿದೆ. ಇದರಿಂದ ರಾಜ್ಯದಲ್ಲಿನ ಜನರ ಜೀವನ ಮಟ್ಟ ಸುಧಾರಿಸಿದೆ. ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಉತ್ತೇಜಕವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ದೊರೆಕಿಸುವ ನಿಟ್ಟಿನಲ್ಲಿ ನುಡಿದಂತೆ ನಡೆದಿದೆ ಎಂದರು.






ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಜನಸಾಮಾನ್ಯರೆಲ್ಲರಿಗೂ ಮರಳುಲಭ್ಯವಾಗುವಂತೆ ಮಾಡಲು ನದಿಪಾತ್ರದಲ್ಲಿ 24 ಮರಳಿನ ಬ್ಲಾಕ್‌ಗಳನ್ನು ಗುರುತಿಸಲಾಗಿದ್ದು ಇದರಲ್ಲಿ 4 ಬ್ಲಾಕ್ ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮರಳು ನೀಡಲು ಮೀಸಲಿರಿಸಿ 20 ಬ್ಲಾಕ್‌ಗಳಲ್ಲಿ ಜನರಿಗೆ ನಿಗಧಿತ ದರದಲ್ಲಿ ಮರಳು ಸಿಗುವಂತೆ ಮಾಡಲು ಟೆಂಡರ್ ಕರೆಯಲಾಗಿದೆ. ಈ ಪ್ರಕ್ರಿಯೆ ಕೆಲವೇ ಕೆಲವೇ ದಿನಗಳಲ್ಲಿ ಪೂರ್ಣಗೊಂಡು ಜನರಿಗೆ ಮರಳು ಲಭ್ಯವಾಗಲಿದೆ ಎಂದರು.


ಜಿಲ್ಲೆಯಲ್ಲಿ ಈವರೆಗೂ 5 ಗ್ಯಾರಂಟಿ ಯೋಜನೆಗಳಿಂದ ಒಟ್ಟು ರೂ. 1966 ಕೋಟಿ ಮೊತ್ತವನ್ನು ನೇರವಾಗಿ ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಅವರ ಖಾತೆಗೆ ವರ್ಗಾಯಿಸಲಾಗಿದೆ. ಶಕ್ತಿ ಯೋಜನೆಯಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ದಾವಣಗೆರೆ ವಿಭಾಗದಿಂದ 6.78 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದು ಇದರ ಪ್ರಯಾಣದ ವೆಚ್ಚವಾಗಿ ರೂ. 190 ಕೋಟಿಗಳನ್ನು ನೀಡಿದೆ.

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ ಮೂರು ಲಕ್ಷದ ಇಪ್ಪತ್ತೊಂಭತ್ತು ಸಾವಿರ ಬಿಪಿಎಲ್ ಪಡಿತರ ಚೀಟಿದಾರರಿಗೆ 5 ಕೆ.ಜಿ. ಅಕ್ಕಿಯೊಂದಿಗೆ 5 ಕೆಜಿಗೆ ನಗದಾಗಿ ತಲಾ ರೂ. 170-ರಂತೆ ಒಟ್ಟು ರೂ. 287 ಕೋಟಿಗಳನ್ನು ಡಿ.ಬಿ.ಟಿ. ಮಾಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 3.61 ಲಕ್ಷ ಯಜಮಾನಿಯರಿಗೆ ರೂ. 1039 ಕೋಟಿ ವರ್ಗಾಯಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ 4.37 ಲಕ್ಷ ಗ್ರಾಹಕರಿಗೆ 442 ಕೋಟಿ ವಿದ್ಯುತ್ ವೆಚ್ಚವಾಗಿ ಪಾವತಿಸಿದೆ. ಯುವನಿಧಿ ಯೋಜನೆಯಡಿ 5802 ಪದವೀಧರ ಹಾಗೂ ಡಿಪ್ಲೊಮಾ ಪಾಸಾದವರಿಗೆ ನಿರುದ್ಯೋಗ ಭತ್ಯೆಯಾಗಿ ರೂ. 8.47 ಕೋಟಿಗಳನ್ನು ಡಿ.ಬಿ.ಟಿ. ಮೂಲಕ ಪಾವತಿಸಲಾಗಿದೆ. ಜಿಲ್ಲೆಗೆ ಪ್ರಧಾನಮಂತ್ರಿ ಗ್ರಾಮೀಣ ಆವಾಸ್ **(5 ನೇ ಪುಟಕ್ಕೆ)**



## ಮೊದಲನೇ ವರ್ಷದ ಪುಣ್ಯ ಸ್ಮರಣೆ



**ದಿ. ಶ್ರೀ ಜಿ.ವಿ.ಶಾಂತಕುಮಾರ್‌ರವರು**

ಜನನ : 12-05-1962 ಲಿಂಗೈಕ್ಯ : 27-01-2024

ನೀವು ನಮ್ಮನ್ನಗಲಿ ವರ್ಷವಾಯಿತು. ನಿಮ್ಮ ಸಾವಿರ ನೆನಪುಗಳು ಸದಾ ನಮ್ಮ ಹೃದಯದಲ್ಲಿವೆ. ನೀವು ನಡೆಸಿದ ಸರಳ ಹಾಗೂ ಪರಿಶ್ರಮದ ಜೀವನ, ಆದರ್ಶ ಬದುಕು ಮತ್ತು ತೋರಿಸಿದ್ದ ಮಾರ್ಗದರ್ಶನ ನಮಗೆ ಎಂದೆಂದಿಗೂ ದಾರಿದೀಪವಾಗಿದೆ.

ಸದಾ ನಿಮ್ಮ ಸ್ಮರಣೆಯಲ್ಲಿರುವ

ಧರ್ಮಪತ್ನಿ ಶ್ರೀಮತಿ ರೇಣುಕಾ ಶಾಂತಕುಮಾರ್, ಮಕ್ಕಳಾದ ಶ್ರೀಮತಿ ಅಶ್ವಿನಿ, ಕುಮಾರಿ ಅರ್ಚನಾ, ಶ್ರೀ ಅಭಿಷೇಕ್, ಶ್ರೀ ಶ್ರೀನಿಧಿ ಹಾಗೂ ಅಳಿಯಂದಿರು.

ಮೊ: 9743343353, 9886624111

# ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಬದ್ಧ

## ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್



**ದಾವಣಗೆರೆ:** ಉಸ್ತುವಾರಿ ಸಚಿವನಾಗಿ ಜಿಲ್ಲೆಯಲ್ಲಿ ಉತ್ತಮ ಕೆಲಸ ಕಾರ್ಯ ಮಾಡಲಾಗುತ್ತಿದೆ. ಸರ್ಕಾರದ ಐದು ಗ್ಯಾರಂಟಿ ಯೋಜನೆ ಹೆಚ್ಚಿನ ಜನರಿಗೆ

ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದ್ದು, ನಮ್ಮ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸದಾ ಬದ್ಧ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆಯಲ್ಲಿ ವಿಶ್ವಕನ್ನಡ ಸಮ್ಮೇಳನ ಆಯೋಜಿಸಲು ಈಗಾಗಲೇ ಮುಖ್ಯಮಂತ್ರಿಗಳ ಬಳಿ ಮಾತನಾಡಲಾಗಿದೆ. ಬರುವ ಬಜೆಟ್ ನಲ್ಲಿ ಸಮ್ಮೇಳನ ಆಯೋಜಿಸಲು ಬೇಕಾದ ಅನುದಾನಕ್ಕೂ ಮನವಿ ಮಾಡಲಾಗಿದೆ ಎಂದರು.

ಕಳೆದ 2018 ರಲ್ಲಿ ನಮ್ಮ ಸರ್ಕಾರವಿದ್ದಾಗಲೇ ವಿಶ್ವ ಕನ್ನಡ ಸಮ್ಮೇಳನಕ್ಕೆ ಅನುದಾನ ಬಿಡುಗಡೆ-ಯಾಗಿತ್ತು ಎಂದರು. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಅದನ್ನು ಹಂತ ಹಂತವಾಗಿ ಸರಿಪಡಿಸುತ್ತಾ ಬರಲಾಗುತ್ತಿದೆ. ಅಕ್ರಮಗಳ ತನಿಖೆ ನಡೆಯುತ್ತಿದೆ. ಒಂದೆರಡು ಮೂರು ವಿಚಾರಗಳ ಬಗ್ಗೆ ತನಿಖೆ ನಡೆಯುತ್ತಿದೆ. ಆಶ್ರಯ ಮನೆಗಳಿಗೆ ಯಾವ ತಾಲ್ಲೂಕಿನಲ್ಲಿ ನಿವೇಶನ ಪಡೆಯಲಾಗಿದೆ? ಯಾವ ಎಷ್ಟು ಪಾಲು ಪಡೆದಿದ್ದಾರೆ? ಈ ಬಗ್ಗೆ ಲೋಕಾಯಕ್ತ ತನಿಖೆ ನಡೆಯುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್. ಆಂಜನೇಯ, ಮೇಯರ್ ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ, ಹೆಚ್.ಬಿ. ಮಂಜಪ್ಪ ಇನ್ನಿತರರು ಉಪಸ್ಥಿತರಿದ್ದರು.

> ಜಲಸಿರಿಗೆ 600 ಕೋಟಿ ಅನುದಾನ... ಜಲಸಿರಿ ಯೋಜನೆಯಡಿ ಕೆಲವೆಡೆ ನೀರು ಬರುತ್ತಿಲ್ಲ. ಆದರೆ ಬಿಲ್ ಬರುತ್ತಿದೆ. ಈ ಬಗ್ಗೆ ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಕೇಳುತ್ತಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಜಲಸಿರಿ ಕೆಲಸ ನಡೆಯುತ್ತಿದೆ. ಇನ್ನೂ ಸಂಪೂರ್ಣವಾಗಿ ಕೆಲಸ ಮುಗಿದಿಲ್ಲ. ಮೀಟರ್ ಅಳವಡಿಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸರಿಪಡಿಸಲಾಗುವುದು. ಹಳೇ ದಾವಣಗೆರೆ ಭಾಗದಲ್ಲಿ ಕೆಲಸ ಕಷ್ಟವಾಗುತ್ತದೆ. ಆದರೆ ಪೈಪ್ ಲೈನ್ ಕಾರ್ಯ ಮುಗಿದಿದೆ. ಕಾಮಗಾರಿಗೆ 600 ಕೋಟಿ ಅನುದಾನ ತರಲಾಗಿದೆ ಎಂದರು.

### ಮಾಯಕೊಂಡದ ಕೆಪಿಎಸ್ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ

# ಸಂವಿಧಾನದಿಂದಲೇ ಸಮಾಜದಲ್ಲಿ ಸಮಾನತೆ: ಬಸವಂತಪ್ಪ

**ಮಾಯಕೊಂಡ:** 'ಸಂವಿಧಾನ ದೇಶಕ್ಕೆ ಬಹುದೊಡ್ಡ ಕೊಡುಗೆಯಾಗಿದ್ದು, ಸಂವಿಧಾನದಿಂದಲೇ ಸಮಾಜದಲ್ಲಿ ಸಮಾನತೆ ನೆಲೆಯೂರಿದೆ, ಎಂದು ಶಾಸಕ ಕೆ. ಎಸ್. ಬಸವಂತಪ್ಪ ಪ್ರತಿಪಾದಿಸಿದರು.

ಮಾಯಕೊಂಡದ ಕೆಪಿಎಸ್ ಮೈದಾನದಲ್ಲಿ ಭಾನುವಾರ ನಡೆದ ಭಾರತದ ಗಣ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸರ್ವರಿಗೂ ಸಮಾನತೆ ಕೊಡಿಸಿರುವ ಸಂವಿಧಾನವೇ ಶ್ರೇಷ್ಠ ಗ್ರಂಥವಾಗಿದೆ. ಭಾರತವನ್ನು ಪ್ರಜಾಸತ್ತಾತ್ಮಕ ದೇಶವನ್ನಾಗಿಸಿರುವುದೇ ಅಂಬೇಡ್ಕರ್ ರಚಿಸಿದ ಸಂವಿಧಾನ. ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂವಿಧಾನ ಕುರಿತು ತಿಳಿವಳಿಕೆ ಮೂಡಿಸಬೇಕು. ದೇಶದಲ್ಲಿ ಶಾಂತಿ ನೆಲೆಸಬೇಕು ಎಂದರೆ ಸಂವಿಧಾನದ ಅಧ್ಯಯನ ಮತ್ತು ಅನುಷ್ಠಾನವಾಗಬೇಕು. ಸಂವಿಧಾನವೇ ನಿಜವಾದ ಧರ್ಮವಾಗಿದ್ದು, ಸಂವಿಧಾನದ ಆಶಯ ಎಲ್ಲೆಡೆ ಬಿತ್ತಿ ಬೆಳೆಯಬೇಕು, ಎಂದು ಕರೆನೀಡಿದರು.

ಬಸವೇಶ್ವರ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಬಿಎಸ್ಸಿ ಮತ್ತು ಬಿ.ಸಿ.ಎ ಕೋರ್ಸ್ ಮಂಜೂರಾಗಿದೆ. ಶೀಘ್ರದಲ್ಲಿ ಡಿಜಿಟಲ್ ಲೈಬ್ರರಿ ನಿರ್ಮಾಣವಾಗಲಿದೆ. ಹೆದ್ದಾರಿ ಬಳಿ ಹಾಸ್ಟೆಲ್ ಮೊರಾರ್ಜಿ ಮಾದರಿ ಶಾಲೆ ನಿರ್ಮಾಣವಾಗಲಿದೆ. ಕ್ರೀಡಾಂಗಣ ಅಭಿವೃದ್ಧಿ ಪಡಿಸಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವೆ, ಎಂದು ಭರವಸೆ ನೀಡಿದರು.



ಗ್ರಾಮ ಪಂಚಾಯತಿ ಸದಸ್ಯ ಬಿ. ಲಕ್ಷ್ಮಣ, ಇಂದಿನ ವ್ಯವಸ್ಥೆಯಲ್ಲಿ ರೈತರಿಗೆ ಬೆಲೆಯಿಲ್ಲದಂತಾಗಿದೆ. ಕೃಷಿಕರು ದಿನೇ ದಿನೇ ವ್ಯವಸಾಯದಿಂದ ವಿಮುಖರಾಗಿದ್ದಾರೆ. ರೈತರಾಗಿಯೂ ಕಷ್ಟಪಟ್ಟು ದುಡಿದು ಉತ್ತಮ ಜೀವನ ನಡೆಸಬಹುದು. ಶಾಸಕರು ದ್ವಿಮುಖ ರಸ್ತೆ, ಬಸ್ ನಿಲ್ದಾಣ ಕಾಮಗಾರಿ ಮುಗಿಸಲು ಕೋರಿದರು.

ಪ್ರಬುದ್ಧ ಭಾರತ ಸಮಿತಿಯ ಹಿಂಡಸಕಟ್ಟೆ ಹನುಮಂತಪ್ಪ, ಕ್ಷೇತ್ರಕ್ಕೆ ವಿಶೇಷ ಅನುದಾನ ತರಬೇಕು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಬೇಕು. ಮಾಯಕೊಂಡದಲ್ಲಿ ಸಿ.ಎಚ್.ಸಿ ಆಸ್ಪತ್ರೆ ನಿರ್ಮಿಸಿ, ಎಂದು ಜಿಲ್ಲಾಧಿಕಾರಿಗೆ ಮನವಿ ಮಾಡಿದರು.

ತಾಲ್ಲೂಕು ಕೃಷಿಕ ಸಮಾಜದ ಸದಸ್ಯ ಎಸ್..ಜಿ. ರುದ್ರೇಶ್, ಪತ್ರಕರ್ತರ ಸಂಘದ ನಿರ್ದೇಶಕ ಮಂಜುನಾಥ ಸಂಡೂರು, ಉತ್ತಮ ರೈತ ಪ್ರಶಸ್ತಿ ಪುರಸ್ಕೃತ ಲಕ್ಷ್ಮಣ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಸ್ಪರ್ಧೆಯಲ್ಲಿ ವಿಜೇತರಿಗೆ, ವಿಶೇಷ ಸಾಧಕರಿಗೆ ಪ್ರಶಸ್ತಿ ನೀಡಲಾಯಿತು. ಕನ್ನಡ ಯುವಶಕ್ತಿ ಕೇಂದ್ರದಿಂದ ಪಥ ಸಂಚಲನೆಯ ತಂಡಗಳಿಗೆ ಬಹುಮಾನ ನೀಡಲಾಯಿತು. ಶಾಸಕರು ಧ್ವಜಾರೋಹಣ ಮಾಡಿ, ಶಾಲಾ-ಕಾಲೇಜು ವಿದ್ಯಾರ್ಥಿಗಳ ಹಾಗೂ ಪೊಲೀಸ್ ತಂಡದಿಂದ ಧ್ವಜವಂದನೆ ಸ್ವೀಕರಿಸಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಲತಾ ಮಲ್ಲಿಕಾರ್ಜುನ, ಉಪಾಧ್ಯಕ್ಷೆ ಶಿವಮ್ಮ ಮತ್ತು ಸದಸ್ಯರು, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ವೆಂಕಟೇಶ್, ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಹನುಮಂತಪ್ಪ,, ಪಿಡಿಒ ಶ್ರೀನಿವಾಸ್, ಸಿಬ್ಬಂದಿ, ಕೆಪಿಎಸ್ ಪ್ರಾಚಾರ್ಯ ಬಸವರಾಜಪ್ಪ, ಉಪನ್ಯಾಸಕರು, ಮುಖ್ಯ ಶಿಕ್ಷಕ, ಶಿಕ್ಷಕರು ಮತ್ತು ಸಿಬ್ಬಂದಿ, ಪಿಎಸ್ಐ ಅಜ್ಜಪ್ಪ ಮತ್ತು ಸಿಬ್ಬಂದಿ, ಉಪ ತಹಶೀಲ್ದಾರ್ ಹಾಲೇಶ್, ರಾಜಸ್ವ ನಿರೀಕ್ಷಕ ಹಿರೇಗೌಡರು, ಗ್ರಾಮ ಲೆಕ್ಕಾಧಿಕಾರಿ ಲೋಹಿತ್, ಅಣಬೇರು ಜಾಫರ್, ಕನ್ನಡ ಯುವಶಕ್ತಿ ಕೇಂದ್ರದ ಅಧ್ಯಕ್ಷ ಶರಣಪ್ಪ ಮತ್ತು ಸದಸ್ಯರು, ಮುಖಂಡರಾದ ಗೋಪಾಲ್, ನಾಗೇಂದ್ರಪ್ಪ, ಗುರುನಾಥ್ ಮತ್ತಿತರರು ಇದ್ದರು.

# ಇಂದಿನ ರಾಶಿ ಭವಿಷ್ಯ

## ಮೇಷ ರಾಶಿ

ಅಭದ್ರತೆ / ದಿಗ್ಭ್ರಮೆಯ ಭಾವನೆ ತಲೆತಿರುಗುವಿಕೆಯನ್ನು ಉಂಟುಮಾಡಬಹುದು. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ಪ್ರತಿಯೊಂದು ವಿಷಯದಲ್ಲಿ ಪ್ರೀತಿಯನ್ನು ತೋರಿಸುವುದು ಸರಿಯಿಲ್ಲ. ಇದು ನಿಮ್ಮ ಸಂಬಂಧವನ್ನು ಸುಧಾರಿಸುವ ಬದಲು ಹಾಳುಮಾಡುತ್ತದೆ. ಹೊಸ ಪಾಲುದಾರಿಕೆ ಇಂದು ಭರವಸೆಯಿಂದ ಕೂಡಿರುತ್ತವೆ.

## ವೃಷಭ ರಾಶಿ

ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿಡಬೇಕು. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು?. ಅತಿಥಿಗಳು ನಿಮ್ಮ ಮನೆಗೆ ಭೇಟಿ ನೀಡಿ ಅದನ್ನು ಆಹ್ಲಾದಕರ ಮತ್ತು ಅದ್ಭುತ ದಿನವನ್ನಾಗಿಸುತ್ತಾರೆ. ಏಕಪಕ್ಷೀಯ ವ್ಯಾಮೋಹ ನಿಮಗೆ ಕೇವಲ ಎದೆಗುದಿ ತರುತ್ತದೆ.

## ಮಿಥುನ ರಾಶಿ

ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಸ್ನೇಹಿತರು ಹಾಗೂ ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ನಿಮ್ಮ ಪ್ರೀತಿಪಾತ್ರರ ಭಾವನೆಗಳನ್ನು ಇಂದು ಅರ್ಥಮಾಡಿಕೊಳ್ಳಿ. ನೀವು ಇಂದು ಹಾಜರಾಗುವ ಉಪನ್ಯಾಸಗಳು ಮತ್ತು ವಿಚಾರಗೋಷ್ಠಿಗಳು ಬೆಳವಣಿಗೆಗೆ ಹೊಸ ವಿಚಾರಗಳನ್ನು ತರುತ್ತವೆ. ನಿಮ್ಮ ಮನಸ್ಸಿನಲ್ಲಿರುವುದನ್ನು ಹೇಳಲು ಹಿಂಜರಿಯದಿರಿ.

## ಕರ್ಕ ರಾಶಿ

ನಿಮ್ಮ ಮಗುವಿನ ಸಾಧನೆ ನಿಮಗೆ ಅಪಾರ ಸಂತೋಷ ನೀಡಬಹುದು. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಮಕ್ಕಳು ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವಿಫಲವಾಗಿ ನಿಮಗೆ ನಿರಾಶೆಯುಂಟುಮಾಡಬಹುದು. ನಿಮ್ಮ ಕನಸು ನನಸಾಗಿಸಲು ನೀವು ಅವರನ್ನು ಪ್ರೋತ್ಸಾಹಿಸಬೇಕು.

## ಸಿಂಹ ರಾಶಿ

ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ – ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

## ಕನ್ಯಾ ರಾಶಿ

ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಇತರರಲ್ಲಿ ಅನಗತ್ಯವಾಗಿ ದೋಷಗಳನ್ನು ಹುಡುಕುವ ನಿಮ್ಮ ಬುದ್ಧಿಗೆ ಸಂಬಂಧಿಕರಿಂದ ಟೀಕೆ ಎದುರಾಗಬಹುದು. ಇದು ಕೇವಲ ಸಮಯ ವ್ಯರ್ಥ ಮಾಡುವಿಕೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ನೀವಿದರಿಂದ ಏನೂ ಗಳಿಸುವುದಿಲ್ಲ. ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳುವುದೊಳ್ಳೆಯದು

## ತುಲಾ ರಾಶಿ

ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು ? ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ. ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಅನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ನೀವು ಪ್ರೀತಿಸುವ ವ್ಯಕ್ತಿಯ ಕಡೆಗಿನ ನಿಮ್ಮ ಒರಟು ವರ್ತನೆ ಸಂಬಂಧದಲ್ಲಿ ಬಹಳಷ್ಟು ಅಸಾಮರಸ್ಯವನ್ನು ತರಬಹುದು. ಕೆಲಸದಲ್ಲಿನ ಸಂಕಷ್ಟಗಳು ಸಹಚರರ ಸಕಾಲಿಕ ಸಹಾಯದಿಂದ ಕಳೆದುಹೋಗುತ್ತವೆ

## ವೃಶ್ಚಿಕ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ – ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ನೀವು ಇಡೀ ಕುಟುಂಬಕ್ಕೆ ಏಳಿಗೆ ತರುವ ಯೋಜನೆಗಳನ್ನು ಆರಿಸಿಕೊಳ್ಳಬೇಕು. ಮೂರನೇ ವ್ಯಕ್ತಿಯ ಹಸ್ತಕ್ಷೇಪ ನೀವು ಮತ್ತು ನಿಮ್ಮ ಪ್ರೀತಿಪಾತ್ರರಲ್ಲಿ ಕಂದಕ ತರಬಹುದು. ನೀವು ಹೆಚ್ಚುವರಿ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯುವಲ್ಲಿ ಸ್ವಲ್ಪ ಹೆಚ್ಚುವರಿ ಸಮಯ ಮತ್ತು ಶಕ್ತಿ ವ್ಯಯಿಸಿದರೆ ಅಗಾಧ ಪ್ರಯೋಜನ ಪಡೆಯುತ್ತೀರಿ.

## ಧನು ರಾಶಿ

ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ. ನಿಮ್ಮ ಕಾರ್ಯಗಳು ದುರಾಶೆಯಿಂದಲ್ಲದೇ ಪ್ರೀತಿ ಮತ್ತು ಸಕಾರಾತ್ಮಕ ದೃಷ್ಟಿಯಿಂದ ನಡೆಯಬೇಕು.

## ಮಕರ ರಾಶಿ

ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ –ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಲು ಪ್ರಯತ್ನಿಸಿ. ನಿಮ್ಮನ್ನು ನೀವೇ ಮುದ್ದಿಸಿಕೊಳ್ಳಲು ಮತ್ತು ನೀವು ಹೆಚ್ಚು ಆನಂದಿಸುವ ಕೆಲಸಗಳನ್ನು ಮಾಡಲು ಒಳ್ಳೆಯ ದಿನ.

## ಕುಂಭ ರಾಶಿ

ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ನೀವು ಇಂದು ಹಣ ಉಳಿಸುವುದು ಕಷ್ಟ ? ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ. ನೀವು ಪ್ರೀತಿಯ ಮನೋಭಾವದಲ್ಲಿರುತ್ತೀರಿ ಮತ್ತು ಅದಕ್ಕೆ ಅವಕಾಶಗಳೂ ಸಾಕಷ್ಟಿರುತವೆ

## ಮೀನ ರಾಶಿ

ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು, ಇದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ.

# ಜಿಲ್ಲಾಡಳಿತ ಭವನದಲ್ಲಿ ಗಣರಾಜ್ಯೋತ್ಸವ

## ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರಿಂದ ಧ್ವಜಾರೋಹಣ



**ಗದಗ :** ನಗರದ ಜಿಲ್ಲಾಡಳಿತ ಭವನದಲ್ಲಿ 76 ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ರವಿವಾರ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಅವರು ರಾಜ್ಯದಲ್ಲಿ 7 ಕೋಟಿ ಸಾರ್ವಜನಿಕರಿದ್ದು ಇದರಲ್ಲಿ 5 ರಿಂದ 6 ಲಕ್ಷ ಜನಕ್ಕೆ ಮಾತ್ರ ಸರ್ಕಾರಿ ನೌಕರಿ ದೊರೆಯುತ್ತದೆ. ನಾವೆಲ್ಲ ಸಾರ್ವಜನಿಕರ ಸೇವೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುವವರಾಗಿದ್ದು ಸರ್ಕಾರದ ಹಾಗೂ ಸಂವಿಧಾನದ ಆಶಯ ಈಡೇರಿಕೆಗೆ ಶ್ರಮಿಸೋಣ ಎಂದರು.

ಸಂವಿಧಾನದ ಅಡಿಯಲ್ಲಿ ನಾವೆಲ್ಲ ಸೇವೆ ಸಲ್ಲಿಸಬೇಕು. ಸಾರ್ವಜನಿಕರಿಗೆ ಸೌಲಭ್ಯ ಕಲ್ಪಿಸುವುದು ನಮ್ಮ ಧ್ಯೇಯವಾಗಿರಬೇಕು. ಗಡಿಯಲ್ಲಿನ ಸೇನೆಯಲ್ಲಿ ಸೇವೆ ಮಾಡುವಂತೆ ನಾವೂ ಸಹ ಸಾರ್ವಜನಿಕರ ಸೇವೆಯಲ್ಲಿ ತೊಡಗಿಕೊಳ್ಳೋಣ. ಸಾರ್ವಜನಿಕರ ಕೆಲಸ ಮಾಡುವ ಮೂಲಕ ಖುಷಿ ಪಡುವ ಮನೋಭಾವ ಬೆಳೆಸಿಕೊಳ್ಳೋಣ ಎಂದರು.

ಭಾರತ ದೇಶದ ಸಂವಿಧಾನ ರಚನೆಯ ಹಿಂದೆ ತುಂಬ ಶ್ರಮವಿದ್ದು ಇದನ್ನು ಪ್ರತಿಯೊಬ್ಬರು ಪಾಲಿಸುವ ಮೂಲಕ ಸಂವಿಧಾನಕ್ಕೆ ಗೌರವ ಸಲ್ಲಿಸುವಂತೆ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ., ಉಪವಿಭಾಗಾಧಿಕಾರಿ ಗಂಗಪ್ಪ ಎಂ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

# ಅಕ್ರಮ ಗೋಮಾಂಸ ಅಂಗಡಿ ತೆರವಿಗೆ ಆಗ್ರಹ

**ದಾವಣಗೆರೆ:** ದಾವಣಗೆರೆಯ ಇಮಾಂ ನಗರ 2 ನೇ ಕ್ರಾಸ್ನ ನಾಗರಕಟ್ಟೆ ಮುಂಭಾಗದಲ್ಲಿರುವ ಅಕ್ರಮ ಗೋಮಾಂಸ ಅಂಗಡಿಯನ್ನು ಕೂಡಲೇ ತೆರವುಗೊಳಿಸಬೇಕು. ಇಲ್ಲವಾದರೆ ಅದೇ ಸ್ಥಳದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಪಾಲಿಕೆ ವಿಪಕ್ಷ ನಾಯಕ ಆರ್.ಎಲ್. ಶಿವಪ್ರಕಾಶ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ರಮ ಗೋಮಾಂಸ ಅಂಗಡಿಯು ಹಿಂದೂ ದೇವರುಗಳ ನಾಗಪ್ರತಿಮೆಯ ಮುಂಭಾಗದಲ್ಲಿದ್ದು, ಅಲ್ಲಿಗೆ ಬರುವ ಭಕ್ತಾದಿಗಳಿಗೆ ತುಂಬಾ ಇರಿಸುಮುರಿಸು ಉಂಟು ಮಾಡುತ್ತಿದೆ. ಹಾಗೂ ಹಿಂದೂ ಭಾವೈಕ್ಯತೆಗೆ ಧಕ್ಕೆ ತರುವಂತಿದೆ.

ಈ ಅಂಗಡಿಯನ್ನು ತೆರವುಗೊಳಿಸುವುದರ ಬಗ್ಗೆ ದಿನಾಂಕ 28–10–2024ರಂದು ಅಲ್ಲಿನ ಸ್ಥಳೀಯ ನಿವಾಸಿಗಳು ಮಹಾನಗರ ಪಾಲಿಕೆ ಆಯುಕ್ತರಿಗೆ ಅಲ್ಲಿನ ಸ್ಥಳೀಯ ಕಾರ್ಪೋರೇಟರ್ ಗೆ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ದೂರಿದರು.

ಅಧಿಕಾರಿಗಳು, ಅವರು ಗುಂಪು ಕಟ್ಟಿಕೊಂಡು ಬರುತ್ತಾರೆ ನಾವೇನು ಮಾಡುವುದು ಎಂದು ತಮ್ಮ ಅಸಹಾಯಕತೆ ಹೇಳಿಕೊಳ್ಳುತ್ತಿದ್ದಾರೆ. ಇಂತಹವರು ಕೆಲಸ ಮಾಡಲಾಗದಿದ್ದರೆ ಬೇರೆ ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗಲಿ ಎಂದು ಕಿಡಿಕಾರಿದರು.

ಈ ಅಂಗಡಿಯವರು ಬಿಸಾಡುವ ಮಾಂಸದ ತುಣುಕು, ಮಲಮೂತ್ರ, ಕೊಯ್ದ ಚರ್ಮದ ತುಂಡುಗಳು ಯುಜಿಡಿ ಚರಂಡಿಯಲ್ಲಿ ಸೇರುತ್ತಿದ್ದು, ಅಲ್ಲಿನ ಸ್ಥಳೀಯ ಸಾರ್ವಜನಿಕರಿಗೆ ಆರೋಗ್ಯದ ಹಿತದೃಷ್ಟಿಯಿಂದ ತುಂಬಾ ತೊಂದರೆಯನ್ನುಂಟು ಮಾಡುತ್ತಿದೆ.

ಸಂಜೆ ವೇಳೆ ಗೋಮಾಂಸದ ಅಂಗಡಿ ತೊಳೆದ ರಕ್ತದ ನೀರನ್ನು ರಸ್ತೆಗೆ ಚೆಲ್ಲುತ್ತಾರೆ.



ಇದರಿಂದಾಗಿ ಸೊಳ್ಳೆ, ನೊಣ ಹಾಗೂ ಕೆಟ್ಟ ವಾಸನೆ ಜಾಸ್ತಿಯಾಗಿರುವ ಕಾರಣ ಸಾರ್ವಜನಿಕರು ತಮ್ಮ ಮೂಗನ್ನು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ. ಹಾಗೂ ಇದು ಸಾಂಕ್ರಾಮಿಕ ರೋಗ ಹರಡಲು ಕಾರಣವಾಗಿದೆ ಎಂದು ದೂರಿದರು.

ಕೂಡಲೇ ಅಕ್ರಮ ಗೋಮಾಂಸ ಅಂಗಡಿಯನ್ನು ಒಂದು ವಾರದೊಳಗೆ ತೆರವುಗೊಳಿಸಬೇಕು ಇಲ್ಲವಾದರೆ ಹಿಂದೂ ಸಂಘಟನೆಯ ಎಲ್ಲಾ ಸಂಘದವರಿಂದ ಅದೇ ಸ್ಥಳದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಆರ್. ಮಲ್ಲಿಕಾರ್ಜುನ್, ಶಂಕರಗೌಡ್ರು ಬಿರಾದರ್, ಕಿರಣ್, ರಾಕೇಶ್, ಮಂಜುನಾಥ್, ರಾಕೇಶ್ ಭಜರಂಗಿ ಇನ್ನಿತರರು ಉಪಸ್ಥಿತರಿದ್ದರು.

## ಸಹಚೇತನದಿಂದ ಅಜಿತಶ್ರೀ ಪ್ರಶಸ್ತಿ ಪುರಸ್ಕಾರ

# ಮಕ್ಕಳಲ್ಲಿ ರಾಷ್ಟ್ರಭಕ್ತಿ ಜಾಗೃತಗೊಳಿಸಿ: ಎಸ್.ಎನ್. ಚನ್ನಬಸಪ್ಪ




**ಶಿವಮೊಗ್ಗ:** ರಾಷ್ಟ್ರಭಕ್ತಿ ಗೀತೆಗಳು ಭಾರತದ ಶಕ್ತಿ, ಶೌರ್ಯ, ಸಾಂಸ್ಕೃತಿಕ ಹಿರಿಮೆ– ಗರಿಮೆ, ಏಕತೆ, ಭಾವೈಕ್ಯತೆ, ಶ್ರೇಷ್ಠ ಮೌಲ್ಯಗಳ ಪ್ರತೀಕವಾಗಿವೆ. ಇಂತಹ ಗೀತೆಗಳ ಮೂಲಕ ಮಕ್ಕಳಲ್ಲಿ ದೇಶಪ್ರೇಮ ಹಾಗೂ ರಾಷ್ಟ್ರಭಕ್ತಿಯನ್ನು ಜಾಗೃತಗೊಳಿಸಬೇಕೆಂದು ಶಾಸಕರು, ಸಹಚೇತನ ನಾಟ್ಯಾಲಯದ ಗೌರವಾಧ್ಯಕ್ಷರಾದ ಎಸ್.ಎನ್. ಚನ್ನಬಸಪ್ಪ (ಚನ್ನಿ) ಕರೆ ನೀಡಿದರು.

ನಗರದ ಸಹಚೇತನ ನಾಟ್ಯಾಲಯವು ಜ. 25ರ ಶನಿವಾರ ಸಂಜೆ 6 ಗಂಟೆಗೆ ಇಲ್ಲಿನ ಕರ್ನಾಟಕ ಸಂಘ ಭವನದಲ್ಲಿ ಹಮ್ಮಿಕೊಂಡಿದ್ದ ಹಿಂದುಳಿದ ಬಡಾವಣೆ ಹಾಗೂ ಆಯ್ದ ಸರ್ಕಾರಿ ಶಾಲಾ ಮಕ್ಕಳಿಂದ ದೇಶಭಕ್ತಿಗೀತೆಗಳ ನೃತ್ಯ ಪ್ರದರ್ಶನ (ಭಾರತೀಯಂ–14 ) ಹಾಗೂ ಅಜಿತಶ್ರೀ–2024 ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ಮಕ್ಕಳಿಂದ ದೇಶಭಕ್ತಿ ಗೀತೆಗಳ ನೃತ್ಯ ಹಮ್ಮಿಕೊಂಡಿರುವುದು ಸಂದರ್ಭೋಚಿತವಾಗಿದೆ. ರಾಷ್ಟ್ರಭಕ್ತಿ ಜಾಗೃತವಾದಲ್ಲಿ ವಿಛಿದ್ರಕಾರಿ ಶಕ್ತಿಗಳನ್ನು ಛಿದ್ರ ಮಾಡಲು ಸಾಧ್ಯವಲ್ಲದೆ ದೇಶವನ್ನು ಗಂಡಾಂತರದಿಂದ ಪಾರು ಮಾಡಬಹುದು ಎಂದರು.

ಸುಮಾರು 8 ಬಡಾವಣೆಯ 180 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇಶಭಕ್ತಿ ಗೀತೆಗಳಿಗೆ ನೃತ್ಯವನ್ನು ಮಾಡಿದ್ದಷ್ಟೇ ಅಲ್ಲದೆ ಅನುಭಾವಿಸಿದ್ದಾರೆ. ಕೇವಲ ಒಂದು ವರ್ಗಕ್ಕಷ್ಟೇ ಸೀಮಿತವಾಗಿದ್ದ ಭರತನಾಟ್ಯದಂತಹ ಕಲೆಯನ್ನು ಸಹನ ಅವರು ಸಹನೆಯಿಂದ ಮಕ್ಕಳಿಗೆ ಕಲಿಸುವ ಮೂಲಕ ಎಲ್ಲಾ ವರ್ಗಕ್ಕೂ ಈ ಕಲೆಯನ್ನು ವಿಸ್ತರಿಸುತ್ತಿದ್ದಾರೆ. ಸಹಚೇತನ ನಾಟ್ಯಾಲಯವು ಸಾಂಸ್ಕೃತಿಕವಾಗಷ್ಟೇ ಅಲ್ಲ, ಸಾಮಾಜಿಕವಾಗಿಯೂ ಕಾರ್ಯತತ್ಪರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತೀಯ ಕಲೆ ಮತ್ತು ಸಂಸ್ಕೃತಿಗೆ ಅನೇಕ ಮಹನೀಯರು ಕೊಡುಗೆ ನೀಡಿದ್ದಾರೆ. ಇಂತಹವರಲ್ಲಿ ಹಿಂದೂ ಸೇವಾ ಪ್ರತಿಷ್ಠಾನದ ಅಜಿತ್ ಕುಮಾರ್ ಸಹ ಒಬ್ಬರು. ಇವರು ಕೇವಲ ವ್ಯಕ್ತಿಯಲ್ಲ, ಇವರೊಂದು ಸಾಂಸ್ಕೃತಿಕ ಸಂಪತ್ತು ಎಂದು ಬಣ್ಣಿಸಿದರು.

ನಮ್ಮ ನಡುವೆ ಸಾಮಾಜಿಕ ಕಾಳಜಿ ಹೊಂದಿರುವ ವ್ಯಕ್ತಿಗಳು ಅನೇಕರಿದ್ದಾರೆ. ಇಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕಾಗಿದೆ. ಸಹಚೇತನ ನಾಟ್ಯಾಲಯವು ಅಜಿತ್ ಕುಮಾರ್ ಅವರ ಹೆಸರಿನಲ್ಲಿ ಅಜಿಶ್ರೀ ಪ್ರಶಸ್ತಿ ನೀಡುವ ಮೂಲಕ ಅವರ ಹೆಸರನ್ನು ಹಸಿರಾಗಿ ಉಳಿಸಿದೆಯಲ್ಲದೆ ಸಮಾಜಮುಖಿ ವ್ಯಕ್ತಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಭೂಮರೆಡ್ಡಿ ಹಾಗೂ ವಿಕಾಸ ಟ್ರಸ್ಟ್‌ನ ಖಜಾಂಚಿ ಶ್ರೀನಿವಾಸ್ ಎಸ್.ಆರ್. ಆಗಮಿಸಿದ್ದರು. ಸಹಚೇತನ ನಾಟ್ಯಾಲಯದ ನೃತ್ಯಗುರು ಸಹನಾ ಚೇತನ್ ಉಪಸ್ಥಿತರಿದ್ದರು.

ವೈದ್ಯಕೀಯ ಹಾಗೂ ಯೋಗ ಸೇವಾ ನಿರತರಾಗಿರುವ ಡಾ.ಎನ್.ಎಲ್. ನಾಯಕ್, ಸಮಾಜ ಸೇವಕರಾದ ಬಸವಾನಿಯ ಶ್ರೀ ರಾಘವೇಂದ್ರ ಎ.ಎಸ್. ಹಾಗೂ ಗ್ರಾಮೀಣ ನೋವು ಉಪಶಮನ ಆರೈಕೆ ಹಾಗೂ ಸಂಶೋಧನಾ ಕೇಂದ್ರವಾದ ಶರಣ್ಯಸೇವಾ ಸಂಸ್ಥೆ ಪರವಾಗಿ ಟಿ.ಆರ್. ಅಶ್ವಥ ನಾರಾಯಣ ಶ್ರೇಷ್ಠಿ ಅವರಿಗೆ ಅಜಿತ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

.ಕಲ್ಲಹಳ್ಳಿಯ ಮಾಧವನೆಲೆ, ಜೋಸೆಫ್(ಬಾಪೂಜಿ)ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುರುಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಕೆ. ಆರ್. ಪುರಂನ ಕರ್ನಾಟಕ ಪಬ್ಲಿಕ್ ಸ್ಕೂಲ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೀಗೆಹಟ್ಟಿ ಮತ್ತು ಸವಾರ್‌ಲೈನ್‌ರಸ್ತೆ (ಡಿ.ಐ.ಆರ್) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು.


# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
# ಗ್ರಾಮ ಪಂಚಾಯಿತಿ ಕಾರ್ಯಾಲಯ ಚನ್ನೇಶಪುರ ಗ್ರಾಮ

ಚನ್ನಗಿರಿ ತಾ॥ ದಾವಣಗೆರೆ ಜಿ॥

ಸಂಖ್ಯೆ:ಗ್ರಾ.ಪಂ/ಇ–ಟೆಂಡರ್ ಪ್ರಕಟಣೆ/01/2024–25 ದಿನಾಂಕ:24/01/2025

## ಟೆಂಡರ್ ಪ್ರಕಟಣೆ
## ಇ–ಪ್ರಕ್ಯೂರ್ ಮೆಂಟ್ ಮೂಲಕ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,ಗ್ರಾಮ ಪಂಚಾಯಿತಿ ಚನ್ನೇಶಪುರ ಚನ್ನಗಿರಿ ತಾಲ್ಲೂಕು ಇವರುನ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿನ M.G.N.R.E.G.A ಯೋಜನೆ 2023–24 ಸಾಲಿನ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರಕ್ಯೂರ್ ಮೆಂಟ್ ಸೆಲ್ ನಲ್ಲಿ ನೋಂದಾಯಿಸಲ್ಪಟ್ಟ ಸಾಮಾಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಐಟಂವಾರು ಟೆಂಡರ್ ಗಳನ್ನು Standarad Tender Documents For E-Procurement For Goods ನಮೂನೆಯಲ್ಲಿ ಆಹ್ವಾನಿಸಲಾಗಿದೆ.

| ಕ್ರ ಸಂ | ವಿವರ | ಟೆಂಡರ್ ವೇಳಾ ಪಟ್ಟಿ |
|---|---|---|
| 1 | ಚನ್ನೇಶಪುರ ಗ್ರಾಮದ ಗುರುರಾಜಪುರ ರಸ್ತೆಯಿಂದ ಸುಧಾಮ್ಮನ ತೋಟದ ಮಾರ್ಗವಾಗಿ ಪಂಚಣ್ಣನ ಕೆರೆ ಕೋಡಿಯವರೆಗೆ ರಸ್ತೆ ಅಭಿವೃದ್ಧ 1512001017/RC/GIS/755935(M.G.R.E.G.A 2023–24 )RDPR/2024–25/IND7048 | 1 ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ–1 ಮತ್ತು ಅನುಬಂಧ–2 ನ್ನು) ಇ–ಪ್ರೊಕ್ಯುರ್ ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ& ಸಮಯ:01/02/2025 ಸಂಜೆ 5.30 ಗಂಟೆಗೆ<br>2. ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 03.02.2025 ಸಮಯ ಸಂಜೆ 5.30<br>3. ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:03.02.2025 ಮತ್ತು ಸಮಯ 5.30 PM |

**ಈ ಟೆಂಡರ್ ಪ್ರಕ್ರಿಯೆಯು ತಾಂತ್ರಿಕ ತೊಂದರೆ ಮತ್ತು ಇತರೆ ವಿಷಯಗಳಿಂದ ರದ್ದತಿಯಾದರೆ ಮತ್ತೊಮ್ಮೆ ಪತ್ರಿಕ ಪ್ರಕಟಣೆ ಮಾಡಲಾಗುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ WWW.kppp.Karna-taka gov.in ನೋಡಿಕೊಳ್ಳುವುದು** ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/
ಅಧ್ಯಕ್ಷರು
ಗ್ರಾಮ ಪಂಚಾಯಿತಿ ಕಾರ್ಯಾಲಯ ಚನ್ನೇಶಪುರ

ಸಹಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯಿತಿ ಕಾರ್ಯಾಲಯ ಚನ್ನೇಶಪುರ


# ಅಬಾಕಸ್, ಮೆಂಟಲ್ ಅರ್ಥ್ಮೆಟಿಕ್ ಸ್ಪರ್ಧೆಯಲ್ಲಿ ಬಹುಮಾನ

**ದಾವಣಗೆರೆ:** ಇತ್ತೀಚೆಗೆ ಗ್ಲ್ ಬ್ರ್ ನ್ದ್ಲ್ಲಿ ಜರುಗಿದ ರಾಷ್ಟ್ರ ಮಟ್ಟದ ಗ್ಯಾಲಕ್ಸಿ ಎಜು.ಇನ್ನೋವೇಶನ್ ಪ್ರೈ.ಲಿ. ಅಬಾಕಸ್ ಮತ್ತು ಮೆಂಟಲ್ ಅರ್ಥ್ಮೆಟಿಕ್ ಸ್ಪರ್ಧೆಯಲ್ಲಿ ದಾವಣಗೆರೆಯ ಲಿಟಲ್ ಜೀನಿಯಸ್ ಅಬಾಕಸ್ ಸೆಂಟರ್‌ನ 23 ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ.ಎ.ಎಂ. ತನ್ವಿತಾ, ಎಸ್. ಪ್ರಾರ್ಥನ, ಕೆ.ಎಸ್. ಮಾನ್ಯ,, ಟಿ.ಪಿ. ತೇಜಸ್ ಸೂಪರ್‌ಚಾಂಪಿಯನ್ ಆಗಿದ್ದರೆ, ಎಂ. ಶಮಂತ್ ಕೃಷ್ಣ, ಆರ್. ಎಸ್. ಹರ್ಷವರ್ಧನ್, ದೈವಿಕ್ ಮುದೆವಾರ್, ಎಂ. ಸಮರ್ಥ, ಎಸದ. , ಬಿ.ಎಂ. ಸಾನ್ವಿಕಾ, ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕನಿಷ್ಕ ಪೂಜಾರ್, ಬಿ.ಬಿ. ಸೆಂಟರ್ ಸಂಸ್ಥೆಯ ಮುಖ್ಯಸ್ಥರಾದ ಲತಾ ಅವಿನಾಶ್ ತಿಳಿಸಿದ್ದಾರೆ.

# ಶೋಷಿತ ಸಮುದಾಯಗಳಿಗೆ ಆದಅನ್ಯಾಯ ಸಹಿಸಲು ಸಾದ್ಯವಿಲ್ಲ ವಿಧಾನ ಪರಿಷತ್ ಸದಸ್ಯರಾದ ಕೆ.ಅಬ್ದುಲ್ ಜಬ್ಬಾರ್ ಸಾಬ್



**ದಾವಣಗೆರೆ :** ಕಾಂತರಾಜ್ ಆಯೋಗವು ನಡೆಸಿರುವ ಸಾಮಾಜಿಕ ಶೈಕ್ಷಣಿಕ ಸಮೀಕ್ಷಾ ವರದಿ ಬಿಡುಗಡೆ ಹಾಗೂ ಅನುಷ್ಠಾನಕ್ಕಾಗಿ ದಾವಣಗೆರೆ ಜಿಲ್ಲಾ ಅಹಿಂದ ಹಾಗೂ ಶೋಷಿತ ವರ್ಗಗಳು:ಶನಿವಾರ ಸಮೃದ್ಧಿ ಕನ್ವೆಷನ್ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ಎರಡನೆ ಸಭೆಯನ್ನುಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯ ಅಹಿಂದ ಹಾಗೂ ಶೋಷಿತ ಸಮುದಾಯಗಳು ಸಂಘಟನಾತ್ಮಕವಾಗಿ ದಾವಣಗೆರೆ ಜಿಲ್ಲೆಯಿಂದಲೇ ಅದಕ್ಕೆ ಚಾಲನೆ ನೀಡಲು ಎರಡನೆ ಸಭೆಮಾಡಲಾಗಿದೆ ಹೊರತು ನಾವು ಯಾರ ವಿರೋದ್ದವು ಅಲ್ಲ ನಮ್ಮ ಹಕ್ಕು ಪಡೆಯಲು ನಮ್ಮ ಹೋರಾಟವಾಗಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಕೆ.ಅಬ್ದುಲ್ ಜಬ್ಬಾರ್ ಸಾಬ್ ಹೇಳಿದರುಕಾಂತರಾಜ್ ಆಯೋಗ ನಡೆಸಿರುವ ಜಾತಿ ಗಣತಿ ವರದಿ ಅನುಷ್ಠಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನರಿಗೆ ನಾವು ಬೆಂಲವಾಗಿನಿಲ್ಲಬೇಕಾಗಿದೆ. ಕಾಂತರಾಜ್ ಆಯೋಗ ನಡೆಸಿರುವ ಸಮೀಕ್ಷಾ ವರದಿ ಬಿಡುಗಡೆ ಮತ್ತು ಅನುಷ್ಠಾನಕ್ಕೆ ಒತ್ತಾಯಮಾಡೋಣ ಹಾಗೆಯೇ ಶೋಷಿತ ಸಮುದಾಯಗಳು ಸಂಘಟನಾತ್ಮಕವಾಗಿ ನಮ್ಮ ಹಕ್ಕು ಪಡೆಯುವಲ್ಲಿ ನಾವೆಲ್ಲ ಜಿಲ್ಲೆಯಲ್ಲಿ ಒಟ್ಟಾಗಿ ಹೋರಾಟ ಮಾಡುವ ಅನಿವಾರ್ಯತೆ ಇದೆ ಎಂದರು.ಜಿಲ್ಲೆಯಲ್ಲಿಅಹಿಂದ ಶೋಷಿತ ಸಮುದಾಯ ಹೆಚ್ಚು ಇದ್ದೆಚೆ ಆದರೂ ನಮ್ಮಲ್ಲಿ ರಾಜಕೀಯ ಆರ್ಥಿಕ ಸಾಮಾಜಿಕ ಅರಿವು ಕಡಿಮೆಯಾಗಿದೆ ಆದ್ದರಿಮದ ಸಂಘಟಿತರಾಗಲು ಈಸಭೆಯ ಉದ್ದೇಶ ದ್ದೇಯೋದ್ದೇಶಗಳಾಗಿವೆ,ಎಂದರು.

## ಸಂಭ್ರಮದ 76ನೇ ಗಣರಾಜ್ಯೋತ್ಸವ ಆಚರಣೆ



**ದಾವಣಗೆರೆ:** ನಗರದ 29ನೇ ವಾಡ್9ನ ಆರ್.ಎಚ್. ಸರ್ಕಲ್ ನಲ್ಲಿ ವಂದೇ ಮಾತರಂ ಕ್ರೀಡಾ ಸಮಿತಿ ವತಿಯಿಂದ 76ನೇ ಗಣರಾಜ್ಯೋತ್ಸವವನ್ನು ಭಾನುವಾರ ಆಚರಿಸಲಾಯಿತು.
ಈ ವೇಳೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಲಿದಾನ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.
ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಟ್ಟುವಳ್ಳಿ ಪ್ರವೀಣ್, ನಿವೃತ್ತ ಸೈನಿಕ ರಾಘವೇಂದ್ರ, ಆನಗೊಡ ನಾಗರಾಜ್, ಮಂಜುನಾಥ್, ಶಶಿ ಸೇರಿದಂತೆ ಅಂಗನವಾಡಿ ಶಿಕ್ಷಕಿಯರು ಹಾಗೂ ಯುವಕರು ಇದ್ದರು.

# ನಿಧನ ಸುದ್ದಿಗಳು

## ಶ್ರೀಮತಿ ಗಿರಿಜಮ್ಮ ವಿ.ಹೆಚ್. ನಿಧನ

**ದಾವಣಗೆರೆ :** ಸಿಟಿ ಸಿದ್ದವೀರಪ್ಪ ಬಡಾವಣೆ, 4ನೇ ಕ್ರಾಸ್ ವಾಸಿ ನಿವೃತ್ತ ಪೊಲೀಸ್ ಅಧೀಕ್ಷಕರಾದ ದಿ ವಿ.ಬಿ. ಹೊಳೆಪ್ಪಗೋಳ್ ಅವರ ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ ವಿ.ಹೆಚ್. ಇವರು ದಿನಾಂಕ : 25.1.2025 ಶನಿವಾರ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ 80 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 26.1.2025ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿದೆ.

## ಗುಡಿಹಿಂದ್ಲ ಶ್ರೀ ಜಿ.ಚನ್ನಬಸಪ್ಪ ನಿಧನ

**ದಾವಣಗೆರೆ:** ತಾಲ್ಲೂಕು ಹುಲಿಕಟ್ಟೆ ಗ್ರಾಮದವಾಸಿ ಗುಡಿಹಿಂದ್ಲ ಶ್ರೀ ಜಿ.ಚನ್ನಬಸಪ್ಪ ಇವರು ದಿನಾಂಕ : 25.01.2025 ರಂದು ಮಧ್ಯಾಹ್ನ 12.30 ಗಂಟೆಗೆ ನಿಧನರಾದರು. ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ದಿನಾಂಕ : 26.01.2025ರ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಸ್ವ–ಗ್ರಾಮ ಹುಲಿಕಟ್ಟೆ ಇಲ್ಲಿ ಮೃತರ ಜಮೀನಿನಲ್ಲಿ ಜರುಗಿದೆ.
ಇಂತಿ ದುಃಖ ತಪ್ತರು :
ಗುಡಿಹಿಂದ್ಲ ಶ್ರೀ ಜಿ.ಸಿ. ನಾರೇಶ್ವರಪ್ಪ ಮತ್ತು ಮಕ್ಕಳು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಗುಡಿಹಿಂದ್ಧ ವಂಶಸ್ಥರು, ನಾರಪ್ಪರ ವಂಶಸ್ಥರು, ಕುಂಭೇರ ವಂಶಸ್ಥರು, ಹುಲಿಕಟ್ಟೆ ಗ್ರಾಮಸ್ಥರು ಹಾಗೂ ಬಂಧು–ಮಿತ್ರರು

# ಗಣರಾಜ್ಯೋತ್ಸವ ಪ್ರಜಾಪ್ರಭುತ್ವದ ಹಬ್ಬವಾಗಿದೆ: ಬಿ. ವಾಮದೇವಪ್ಪ



**ದಾವಣಗೆರೆ:** ಸ್ವಾತಂತ್ರ್ಯ ಭಾರತದಲ್ಲಿ ಜನವರಿ 26,1950 ರಂದು ಸಂವಿಧಾನ ಜಾರಿಗೆ ಬಂದ ದಿನ. ಅದರ ಗೌರವಾರ್ಥವಾಗಿ ಪ್ರತಿವರ್ಷದಂತೆ ಗಣರಾಜ್ಯೋತ್ಸವವನ್ನು ದೇಶದೆಲ್ಲೆಡೆ ಅತ್ಯಂತ ಸಡಗರ ಸಂಭ್ರಮ ದಿಂದ ಆಚರಿಸಲಾಗುತ್ತಿದೆ. ಭಾರತ ಸ್ವತಂತ್ರ ಮತ್ತು ಪ್ರಜಾಪ್ರಭುತ್ವದ ಆದರ್ಶಗಳಿಗೆ ದೇಶದ ಬದ್ಧತೆಯನ್ನು ಆಚರಿಸುವ ದಿನ ಇದಾಗಿದೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ವಾಮದೇವಪ್ಪನವರು ತಿಳಿಸಿದರು.

ಭಾನುವಾರ ಕುವೆಂಪು ಕನ್ನಡ ಭವನದಲ್ಲಿ 76 ನೇ ಗಣರಾಜ್ಯೋತ್ಸವದ ಪ್ರಯುಕ್ತ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ನಮ್ಮ ಸಂವಿಧಾನ ರೂಪಿಸುವಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಕೊಡುಗೆ ಮಹತ್ವದ್ದಾಗಿದೆ. ಸಂವಿಧಾನದಲ್ಲಿ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವದ ತತ್ವಗಳನ್ನು, ಮೌಲ್ಯಗಳನ್ನು ಅಳವಡಿಸಿದ್ದಾರೆ. ಇದು ಭಾರತದ ಪ್ರಜಾಪ್ರಭುತ್ವದ ಚೌಕಟ್ಟಿಗೆ ಭದ್ರ ಬುನಾದಿಯಾಯಿತು. ನಮ್ಮ ಸಂವಿಧಾನವನ್ನು 2 ವರ್ಷ 11 ತಿಂಗಳು 18 ದಿನಗಳಲ್ಲಿ ರಚನೆಯಾಗಿದ್ದು, ಅದರಲ್ಲಿ 12 ಅನುಚ್ಛೇದಗಳು, 25 ಭಾಗಗಳು, 470 ವಿಧಿಗಳು ಅಡಕವಾಗಿವೆ. ಇಲ್ಲಿ ಪ್ರಜೆಗಳೇ ಪ್ರಭುಗಳು, ದೇಶದ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಅದರ ಪಾತ್ರ ಮಹತ್ವದ್ದಾಗಿದೆ. ಇಂದು ನಾವೂ ನೀವೆಲ್ಲರೂ ಇದರ ಮೌಲ್ಯಗಳನ್ನು, ನಿಯಮಗಳನ್ನು ಪಾಲಿಸಬೇಕಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸುಮತಿ ಜಯಪ್ಪ ಸಂವಿಧಾನದ ಪ್ರಸ್ತಾವನೆಯನ್ನು ಓದಿ ಪ್ರತಿಜ್ಞಾವಿಧಿ ಮಾಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕ ಸಾ ಪ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಪದಾಧಿಕಾರಿಗಳಾದ ಎನ್.ಎಸ್. ರಾಜು, ಬೈರೇಶ್ವರ , ಸುದರ್ಶನ್, ರುದ್ರಾಕ್ಷಿ ಬಾಯಿ, ತಾಲ್ಲೂಕು ಕ ಸಾ ಪ ಪದಾಧಿಕಾರಿಗಳಾದ ಬಿ. ವಿ. ಪರಿಮಳ ಜಗದೀಶ್, ವೀಣಾ ಕೃಷ್ಣಮೂರ್ತಿ, ರೇಖಾ ಓಂಕಾರಪ್ಪ, ಕೆ. ಶಿವಶಂಕರ್ ಮತ್ತು ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ. ಪರಮೇಶ್ವರಪ್ಪ, ಸಿದ್ದೇಶಪ್ಪ ಆರ್, ಭರಮಪ್ಪ ಮೈಸೂರ್, ಗರಗ ಕುಮಾರಪ್ಪ, ಮರುಳಸಿದ್ದಪ್ಪ ಯರೇಚಿಕ್ಕನಹಳ್ಳಿ, ಕುಲಕರ್ಣಿ, ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಜಿ.ಎಸ್. ಪ್ರೇಮಾ, ಮಮತಾ ಶ್ರೀಧರ್, ವೀಣಾ ಮಹಾಂತೇಶ್, ಕುಸುಮ ಲೋಕೇಶ್, ವಿನೋದ ಉಪಸ್ಥಿತರಿದ್ದರು.

ಆರಂಭದಲ್ಲಿ ವಿನೂತನ ಮಹಿಳಾ ಸಮಾಜದ ಸದಸ್ಯೆಯರು ರಾಷ್ಟಗೀತೆ, ಧ್ವಜಗೀತೆ ಹಾಡಿದರು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಸ್ವಾಗತಿಸಿದರು.

ಸತ್ಯಭಾಮಾ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಸೇವಾದಳದ ಎ. ಆರ್. ಗೋಪಾಲಪ್ಪ, ಹೆಚ್. ಹನುಮಂತಪ್ಪ ಧ್ವಜ ನಿರ್ವಹಣೆ ಕೈಗೊಂಡರು.

## ಸಂವಿಧಾನದ ಮಹತ್ವ ಸಾರುವ ಬ್ಯಾಡ್ಜ್ ಧರಿಸಿದ ಸಚಿವರು– ಸಂಸದರು



**ದಾವಣಗೆರೆ. ಜ.26:** 76 ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಸಂವಿಧಾನದ ಮಹತ್ವ ಸಾರುವ ಸಂವಿಧಾನದ ಪೀಠಿಕೆಯ ಬ್ಯಾಡ್ಜ್ ಧರಿಸುವ ಮೂಲಕ ಗಮನಸೆಳೆದರು. ನ್ಯಾಯ,ಸಮಾನತೆ ಮತ್ತು ಸ್ವಾತಂತ್ರ್ಯದ ಮೂರ್ತ ಸ್ವರೂಪ ಹಾಗೂ ದೇಶದ ಐಕ್ಯತೆಯ ಪ್ರತೀಕವಾ? ನಮ್ಮ ಸಂವಿಧಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಸಚಿವರು ಹಾಗೂ ಸಂಸದರು ಗಮನಸೆಳೆದಿದ್ದು ವಿಶೇಷವಾಗಿತ್ತು.

# ಸಂವಿಧಾನದ ಆಶಯಗಳ ಸಾಕಾರಕ್ಕೆ ಕಾಂಗ್ರೆಸ್ ಪಕ್ಷದ ಆಡಳಿತ ಸಾಕ್ಷಿ: ಶಾಸಕ ಬಿ. ದೇವೇಂದ್ರಪ್ಪ ಅಭಿಮತ



**ಜಗಳೂರು:** ಸಂವಿಧಾನದ ಆಶಯಗಳ ಸಾಕಾರಕ್ಕೆ ರಾಜ್ಯದಲ್ಲಿನ ಕಾಂಗ್ರೆಸ್ ಆಡಳಿತ ಪಕ್ಷ ಸಾಕ್ಷಿಯಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಬಯಲು ರಂಗಮಂದಿರ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 76 ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ ಸರಕಾರ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಜನಪರ ಆಡಳಿತ ನಡೆಸುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳನ್ನೊಳಗೊಂಡಂತೆ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಬದ್ದನಾಗಿರುವೆ ಎಂದು ಭರವಸೆ ನೀಡಿದರು.

ಸಂವಿಧಾನದ ಆಶಯಗಳನ್ನು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಸಂವಿಧಾನ ಉಳಿಸಲು ನಾವೆಲ್ಲರೂ ಕಂಕಣಬದ್ದರಾಗಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಲು ಸಂವಿಧಾನವೇ ಮೂಲಾಧಾರ. ಸಂವಿಧಾನದ ಮೀಸಲಾತಿಯಡಿ ನಾನೂ ಒಬ್ಬ ಶಾಸಕನಾಗಿ ಆಯ್ಕೆಗೊಂಡಿರುವೆ,. ಟೀ ಮಾರುವ ವ್ಯಕ್ತಿ, ಮಣ್ಣಿನ ಮಕ್ಕಳು ದೇಶಕ್ಕೆ ಪ್ರಧಾನಿಯಾಗಿದ್ದಾರೆ. ವೈವಿಧ್ಯತೆಯಲ್ಲಿ ಏಕತೆ ಸಾರುವ ಸಾರ್ವಭೌಮತ್ವ ದೇಶದಲ್ಲಿ ಜನಿಸಿದ ನಾವು ಜನ್ಮಭೂಮಿ, ಜನ್ಮ ನೀಡಿದ ತಾಯಿಯ ಋಣ ತೀರಿಸಬೇಕು ಎಂದು ಮಾರ್ಮಿಕವಾಗಿ ನುಡಿದರು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ. ಬಸವರಾಜ್ ಮರೇನಹಳ್ಳಿ ಮಾತನಾಡಿ, ದೇಶದಲ್ಲಿ ನೆಮ್ಮದಿ, ಶಾಂತಿ, ಸುವ್ಯವಸ್ಥೆಗೆ ಕಾರಣ ದೇಶದ ಶ್ರೇಷ್ಠ ಗ್ರಂಥ ಸಂವಿಧಾನ. ಪ್ರತಿಯೊಬ್ಬರಿಗೂ ಸಮಾನ ಮತದಾನದ ಹಕ್ಕನ್ನು ಕಲ್ಪಿಸಿದೆ. ಮಹಿಳೆಯರ ಮುಖ್ಯವಾಹಿನಿಗೆ ಕಾರಣವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಧ್ವಜಾರೋಹಣ, ವಿವಿಧ ಶಾಲಾ ಮಕ್ಕಳಿಂದ ದೇಶಭಕ್ತಿಗೀತೆಗಳಿಗೆ ನೃತ್ಯ, ಪಥಸಂಚಲನ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಉಪಾಧ್ಯಕ್ಷೆ ಲೋಕಮ್ಮ, ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಎಲ್. ತಿಪ್ಪೇಸ್ವಾಮಿ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಶ್ರೀನಿವಾಸ್, ಬಿಇಓ ಹಾಲಮೂರ್ತಿ, ತಾ.ಪಂ. ಇಓ ಕೆಂಚಪ್ಪ, ಪ.ಪಂ. ಸದಸ್ಯರುಗಳು, ನಾಮನಿರ್ದೇಶಿತ ಸದಸ್ಯರುಗಳು, ಮುಖಂಡರಾದ ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಗೌಸ್ ಅಹಮ್ಮದ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಹರಿಹರ: ಶಾಸಕ ಬಿ.ಪಿ. ಹರೀಶ್ ಅವರಿಂದ ಧ್ವಜಾರೋಹಣ



**ದಾವಣಗೆರೆ:** ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಹರಿಹರ ತಾಲ್ಲೂಕು ಆಡಳಿತ ವತಿಯಿಂದ ಹರಿಹರ ನಗರದ ಮಹಾತ್ಮಾ ಗಾಂಧಿ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್ ಅವರು ಪಾಲ್ಗೊಂಡು,ಮಾತನಾಡಿ ರಾಷ್ಟ್ರ ಧ್ವಜಕ್ಕೆ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ , ತಹಶೀಲ್ದಾರ್ ಗುರುವಾಸವರಾಜ್ , ಇಓ ಸುಮಲತಾ , ನಗರಸಭಾ ಪೌರಾಯುಕ್ತರ ಸುಬ್ರಹ್ಮಣ್ಯ ಶೆಟ್ಟಿ, ನಗರ ಇನ್ಸ್ಪೆಕ್ಟರ್ ದೇವಾನಂದ್ , ಹರಿಹರ ವೃತ್ತ ನಿರೀಕ್ಷಕರಾದ ಸುರೇಶ್ ಸಗಿರಿ , ಬಿಆರ್ ಸಿ ಕೃಷ್ಣಪ್ಪ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು , ಶಾಲಾ ಮಕ್ಕಳು , ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

## ಅತ್ತಿಗೆರೆ ಚನ್ನಪ್ಪ ಶಿವಲಿಂಗಯ್ಯ ಕಾಲೇಜಿನಲ್ಲಿ ಗಣರಾಜ್ಯೋತ್ಸವ




**ದಾವಣಗೆರೆ:** ಶ್ರೀಮತಿ ಚನ್ನಪ್ಪಳ ಶಿವಲಿಂಗಮ್ಮ ಗುರುಬಸಪ್ಪ ಕಲಾ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜು ಅತ್ತಿಗೆರೆಯಲ್ಲಿ 76ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಅರವಿಂದ ವಿದ್ಯಾಸಂಸ್ಥೆ ಅಧ್ಯಕ್ಷ ಪ್ರೊ. ಚನ್ನಪ್ಪ ಹೆಚ್. ಪಲ್ಲಾಗಟ್ಟೆ ಧ್ವಜಾರೋಹಣ ನೆರವೇರಿಸಿದರು. ಕಾರ್ಯದರ್ಶಿ ಪ್ರೊ. ಕೆ. ಆರ್. ಸಿದ್ದಪ್ಪ, ಪ್ರಾಚಾರ್ಯರು, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಫೋಟೋಗ್ರಾಫರ್ಸ್ ಅಕಾಡೆಮಿ ಸ್ಥಾಪಿಸಲು ಸಂತೋಷ್ ಲಾಡ್‌ಗೆ ಮನವಿ




**ದಾವಣಗೆರೆ:** ದಾವಣಗೆರೆ ಜಿಲ್ಲೆ ಸೇರಿದಂತೆ ಕರ್ನಾಟಕ ರಾಜ್ಯದಾದ್ಯಂತ ಸುಮಾರು 6 ಲಕ್ಷಕ್ಕೂ ಹೆಚ್ಚು ಫೋಟೋಗ್ರಫಿ, ವೀಡಿಯೋಗ್ರಫಿ ವೃತ್ತಿಗೆ ಅವಲಂಬಿತರಾಗಿ ತಮ್ಮ ಜೀವನ ನಡೆಸುತ್ತಿದ್ದು, ಅಕಾಡೆಮಿ ಸ್ಥಾಪಿಸುವಂತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ದಾವಣಗೆರೆ ತಾಲ್ಲೂಕು ಫೋಟೋಗ್ರಾಫರ್ಸ್ ಹಾಗೂ ವೀಡಿಯೋ ಗ್ರಾಫರ್ ಸಂಘದ ಅಧ್ಯಕ್ಷ ಮನು ಮನವಿ ಸಲ್ಲಿಸಿದರು.

ನಮ್ಮ ವೃತ್ತಿ ಬಾಂಧವರಿಗೆ ನಮ್ಮದೇ ಆದ ಒಂದು ಅಕಾಡೆಮಿಯನ್ನು ಮಾಡುವಂತೆ ಈ ಹಿಂದಿನ ಎಲ್ಲಾ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಬರಲಾಗಿದೆ. ಇದುವರೆಗೂ ಈ ಕಾರ್ಯ ನಮ್ಮ ರಾಜ್ಯ ಸರ್ಕಾರದಿಂದ ಆಗಿರುವುದಿಲ್ಲ. ಈ ಅಕಾಡೆಮಿ ಮಾಡುವುದರಿಂದ ನಮ್ಮ ಫೋಟೋ, ವಿಡಿಯೋ ಗ್ರಾಫರ್ ಗಳಿಗೆ ಬಹಳ ಅನುಕೂಲವಾಗಲಿದೆ. ದಯವಿಟ್ಟು ನಮ್ಮ ಮನವಿಗೆ ಸ್ಪಂಧಿಸಿ ತಾವು ಫೋಟೋಗ್ರಾಫರ್ ಗಳಿಗೆ ಸಂಬಧಿಸಿದ ಅವರ ವೃತ್ತಿ ಬಾಂಧವರಿಗೆ ಅನುಕೂಲವಾಗುವಂತೆ ಅಕಾಡೆಮಿ ನಿರ್ಮಿಸುವಂತೆ ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ ಎಂದು ಕೋರಿದರು.

ತಾಂತ್ರಿಕತೆ ಬದಲಾದಂತೆ ಕ್ಯಾಮರಾ, ಲೆನ್ಸ್‌ಗಳು, ಬ್ಯಾಟರಿ ಸೇರಿದಂತೆ ವೃತ್ತಿಗೆ ಸಂಬಧಿಸಿದ ಎಲ್ಲಾ ವಸ್ತುಗಳೂ ಕೂಡಾ ಬದಲಾಗುತ್ತಿವೆ. ಅವುಗಳಿಗೆ ಅಷ್ಟು ಬಂಡವಾಳ ಹಾಕಿ ಕ್ಯಾಮರಾ ಪರಿಕರಗಳನ್ನು ಖರೀದಿಸಲು ಬಹಳ ತೊಂದರೆಯಾಗುತ್ತಿದೆ. ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳಿದ ನಮ್ಮ ವೃತ್ತಿ ಬಾಂಧವರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಕ್ಯಾಮರಾ ಖರೀದಿಸಲು ಅನುಕೂಲ ಮಾಡಿಕೊಡಬೇಕು. ನಮಗೆ ಯಾವುದೇ ರೀತಿಯ ಸಹಕಾರ ಇರುವುದಿಲ್ಲ. ನಮ್ಮ ಕ್ಯಾಮರಾಗಳಿಗೆ ಯಾವುದೇ ವಿಮೆ ಇರುವುದಿಲ್ಲ. ದಯವಿಟ್ಟು ನಮ್ಮ ಮನವಿಯನ್ನು ತಾವು ಗಮನ ಹರಿಸಬೇಕೆಂದು ಕೇಳಿಕೊಂಡರು.

ನಮ್ಮ ವೃತ್ತಿ ಬಾಂಧವರಿಗೆ ವರ್ಷದಲ್ಲಿ ಕೇವಲ 6–8 ತಿಂಗಳು ಮಾತ್ರ ಕೆಲಸಗಳು ಇರುತ್ತವೆ. ಇನ್ನುಳಿದ ದಿನಗಳಲ್ಲಿ ಕೆಲಸಗಳು ಇರುವುದಿಲ್ಲ. ಮಾಡಿದ ವೃತ್ತಿಗೆ ತಕ್ಕ ಪ್ರತಿಫಲ ಸಿಗುವುದು ಬಹಳ ಕಷ್ಟವಾಗಿದೆ. ನಮ್ಮ ವೃತ್ತಿ ಬಾಂಧವರಿಗೆ ತಮ್ಮ ಮಕ್ಕಳು, ಕುಟುಂಬ, ಜೀವನ ನಡೆಸುವುದು ಬಹಳ ಕಷ್ಟಕರವಾಗಿದೆ. ಮಕ್ಕಳ ಓದಿಗೆ ಫೀಜು ಕಟ್ಟಲು ಸಹಾ ಕಷ್ಟವಾಗಿದೆ. ಅಂತಹದರಲ್ಲಿಯೇ ಪ್ರತಿ ವರ್ಷ ಹಿರಿಯ ಛಾಯಾಗ್ರಾಹಕರಿಗೆ, ವೃತ್ತಿ ಬಾಂಧವರ ಸೇವೆ ಗುರುತಿಸಿ ಸನ್ಮಾನಿಸಿ ಗೌರವಿಸುವ ಕೆಲಸ ಮಾಡುತ್ತಾ ಬಂದಿದ್ದೇವೆ ಎಂದು ತಮ್ಮ ಅಳಲು ತೋಡಿಕೊಂಡರು.

ಯಾವುದೇ ಸರ್ಕಾರಿ, ಖಾಸಗಿ, ರಾಜಕೀಯ, ಶುಭ ಕಾರ್ಯಗಳು ಯಾವುದೇ ಇರಲಿ ಅಲ್ಲಿ ಫೋಟೋಗ್ರಾಫರ್ ಗಳ ಅವಶ್ಯಕತೆ ಇದ್ದೇ ಇರುತ್ತದೆ. ಅವರು ಇರದಿದ್ದರೆ ಯಾವುದೇ ಕಾರ್ಯಕ್ರಮಗಳು ನಡೆಯುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಮೊಬೈಲ್‌ಗಳು ಬಂದಾಗಿನಿದ ಫೋಟೋಗ್ರಾಫರ್ ಗಳಿಗೆ ಕೆಲಸಗಳು ಇಲ್ಲದಂತಾಗಿದೆ. ಆದರೆ ಅವರಿಗೆ ತಕ್ಕಂತೆ ಸರ್ಕಾರದಿಂದ ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಿಗುವಂತಹ ಸೌಲಭ್ಯಗಳನ್ನು ನಮ್ಮ ಫೋಟೋಗ್ರಾಫರ್ ಗಳಿಗೆ ವೃತ್ತಿ ಬಾಂಧವರಿಗೆ ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿ ವರ್ಷ ನಮ್ಮ ಮಕ್ಕಳಿಗೆ ಶಿಕ್ಷಣಕ್ಕೆ ಸಂಬಧಿಸಿದ ಪುಸ್ತಕಗಳು, ಯೂನಿಫಾರಂ, ಪಠ್ಯಪರಿಕರಗಳು, ಶಾಲೆಯ ಫೀಜು, ನಮ್ಮ ಕುಟುಂಬಗಳಿಗೆ ಆಹಾರ ಕಿಟ್‌ಗಳು, ನಮ್ಮ ಮಕ್ಕಳಿಗೆ ಲ್ಯಾಪ್‌ಟಾಪ್, ಕಂಪ್ಯೂಟರ್, ಇತರೆ ಸವಲತ್ತುಗಳನ್ನು ನೀಡಬೇಕು. ಮುಂದಿನ ಶಿಕ್ಷಣಕ್ಕೆ ಬೇಕಾದ ಸಾಲದ ಸವಲತ್ತುಗಳನ್ನು ತಕ್ಷಣಕ್ಕೆ ವಿದ್ಯಾರ್ಥಿ ವೇತನ ರೂಪದಲ್ಲಿ ಪ್ರತಿವರ್ಷ ನೀಡುವಂತಾಗಬೇಕು. ವೃತ್ತಿ ಬಾಂಧವರಿಗೆ ಆಪತ್ ಕಾಲದಲ್ಲಿ ತೊಂದರೆಯಾದಾಗ ಸರ್ಕಾರ, ಆಸ್ಪತ್ರೆಗಳಿಂದ ಯಾವುದೇ ರೀತಿಯ ಹಣ ಪಡೆಯದೇ ಉಚಿತವಾಗಿ ಶಸ್ತ್ರ ಚಿಕಿತ್ಸೆ , ಆರೋಗ್ಯ ತಪಾಸಣೆ ಮಾಡುವಂತಾಗಬೇಕು. ಹಾಗಾಗಿ ವೃತ್ತಿ ಬಾಂಧವರಿಗೆ ಅನುಕೂಲವಾಗುವಂತೆ ಒಂದು ಅಕಾಡೆಮಿ ಸ್ಥಾಪಿಸಬೇಕು ಎಂದು ತಮ್ಮಲ್ಲಿ ವಿನಂತಿಸುತ್ತಿದ್ದೇವೆ ಎಂದರು.

ಪ್ರತಿವರ್ಷ ನಮ್ಮ ಫೋಟೋಗ್ರಾಫರ್ ಸಂಘದ ಸದಸ್ಯರ ಸಹಕಾರದಿಂದ ಆರೋಗ್ಯ ತಪಾಸಣೆ, ಸರ್ಕಾರಿ ಶಾಲೆಯ ಬಡ ಮಕ್ಕಳಿಗೆ ನೋಟ್‌ಪುಸ್ತಕ, ಪೆನ್ ವಿತರಣೆ, ಅನಾಥಾಶ್ರಮದ ಮಕ್ಕಳಿಗೆ ಅನ್ನಸಂತರ್ಪಣೆ, ಕೋವಿಡ್ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಫೋಟೋಗ್ರಾಫರ್ ಗಳಿಗೆ ಆಹಾರ ಧಾನ್ಯಗಳ ಕಿಟ್ ವಿತರಣೆ, ನಮ್ಮ ಸಂಘದ ಸದಸ್ಯರುಗಳ ಸಹಕಾರದೊಂದಿಗೆ ನಮ್ಮ ಕೈಲಾದ ಮಟ್ಟಿಗೆ ನೆರವು ನೀಡುವ ಕೆಲಸ ನಿರ್ವಹಿಸಿದ್ದೇವೆ. ಬರೀ ಫೋಟೋಗ್ರಾರ್ಸ್‌ಗಳು ಅಲ್ಲದೇ ಬೀದಿ ಬದಿ ವ್ಯಾಪಾರಿಗಳು, ತರಕಾರಿ ಮಾರುವ ರೈತರು, ಹೊರ ಊರುಗಳಿಂದ ಬಂದಂತಹ ಪ್ರಯಾಣಿಕರಿಗೆ, ಹೈವೇ ರಸ್ತೆಯಲ್ಲಿ ಲಾರಿ, ವಾಹನಗಳ ಚಾಲಕರು, ಕ್ಲೀನರ್‌ಗಳಿಗೆ ಊಟದ ಪೊಟ್ಟಣ ನೀಡುವ ಕೆಲಸವನ್ನು ಮಾಡಿರುತ್ತೇವೆ. ನಮ್ಮಲ್ಲಿ ಎಷ್ಟೇ ಕಷ್ಟವಿದ್ದರೂ ಕೂಡಾ ನಗು ಮೊಗದಿಂದ ಗ್ರಾಹಕರ ಮಧುವೆ, ಶುಭ ಕಾರ್ಯಕ್ರಮಗಳನ್ನು ಮಾಡಿಕೊಡುವ ದೃಷ್ಠಿ ನಮ್ಮದಾಗಿದೆ ಎಂದು ತಿಳಿಸಿದರು.

ನಮ್ಮ ವೃತ್ತಿ ಬಾಂದವರಿಗೆ ಅವಶ್ಯಕತೆ ಇರುವಂತಹ ಸವಲತ್ತುಗಳನ್ನು ನಮಗೆ ನೀಡಬೇಕೆಂದು ಹುಬ್ಬಳಿಯಲ್ಲಿ ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಫೋಟೋ ಟುಡೇ (ಡಿ.ಜಿ.ಇಮೇಜ್) ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರಿಗೆ ದಾವಣಗೆರೆ ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘ(ರಿ.), ವತಿಯಿಂದ ಅಧ್ಯಕ್ಷ, ಮನು.ಎಂ. ಮನವಿ ಕೊಡಲಾಯಿತು. ಮನವಿ ಸ್ವೀಕರಿಸಿದ ಸಚಿವರು ಮುಖ್ಯಮಂತ್ರಿ ಗಳೊಂದಿಗೆ ಮುಂದಿನ ಅಧೀವೇಶನದಲ್ಲಿ ಚರ್ಚಿಸಿತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘ(ರಿ.), ವತಿಯಿಂದ ಅಧ್ಯಕ್ಷ, ಎಂ.ಮನು. ಗೌರವ ಅಧ್ಯಕ್ಷ ಬಿ.ಮಂಜುನಾಥ್, ಗ್ರಾಮಾಂತರ ವಲಯ ಅಧ್ಯಕ್ಷ ಕೊಂಡಜ್ಜಿ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ದೇವೇಂದ್ರಪ್ಪ, ಉಪಾಧ್ಯಕ್ಷ ರಮೇಶ್ ಖಜಾಂಚಿ, ರಂಗನಾಥ ಮಾಜಿ ಪ್ರಧಾನ ಕಾರ್ಯದರ್ಶಿ, ಮಲ್ಲೇಶ್.ಎಚ್.ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಿಲ್ಲಾಡಳಿತ ವಿದ್ಯಾರ್ಥಿಗಳಿಗೆ ನಗರ ಸಾರಿಗೆ ಸೌಲಭ್ಯ ಕಲ್ಪಿಸಲು ಮನಸ್ಸು ಮಾಡಬೇಕು : ಡಾ. ಸ್ವಾಮಿ



**ಚಿತ್ರದುರ್ಗ:** ಚಿತ್ರದುರ್ಗದ ಜಿಲ್ಲಾ ಆಡಳಿತ ನಗರದ ವಿದ್ಯಾರ್ಥಿಗಳಿಗೆ ಸೂಕ್ತವಾದ ಸಾರಿಗೆ ವ್ಯವಸ್ಥೆ ಕಲ್ಪಿಸದೆ, ಕಣ್ಣು ಮುಚ್ಚಿ, ಕಿವಿ ಮುಚ್ಚಿ ಕುಳಿತಂತೆ ಕಾಣುತ್ತಿದೆ, ದಿನನಿತ್ಯ ಶಾಲಾ ಕಾಲೇಜುಗಳು ಹೋಗುವ ನಗರದ ವಿದ್ಯಾರ್ಥಿಗಳು, ರಸ್ತೆಯ ಬದಿಯಲ್ಲಿ ಹೋಗಿ ಬರುವ ವಾಹನಗಳಿಗೆಲ್ಲ ಕೈಚಾಚಿ, ಅವರಿಂದ ಲಿಫ್ಟ್ ಪಡೆದು, ಶಾಲಾ ಕಾಲೇಜುಗಳಿಗೆ ತಲುಪುತ್ತಿದ್ದಾರೆ, ನಗರ ಸಾರಿಗೆ ಇಲಾಖೆಯವರು ವಿದ್ಯಾರ್ಥಿಗಳು ತಮಗಿಷ್ಟ ಬಂದಂತೆ ಜೀವನ ಮಾಡಿಕೊಂಡು ಬದುಕಲಿ ಎಂದು ಕೈ ಬಿಟ್ಟಂತೆ ಕಾಣುತ್ತಿದೆ. ಜೆ ಸಿ ಆರ್ ಬಡಾವಣೆಯಲ್ಲಿ ಮೂರು ನಾಲ್ಕು ಕಾಲೇಜಿನ ವಿದ್ಯಾರ್ಥಿಗಳು, ದಿನನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ದಾರಿಯಲ್ಲಿ ಹೋಗುವ ದ್ವಿಚಕ್ರ ವಾಹನಗಳಿಗೆ ಕೈಚಾಚಿ ಬೇಡಿಕೊಂಡು, ಅವರು ದಯೆ ತೋರಿಸಿ ಕೂರಿಸಿಕೊಂಡು ಹೋದರೆ ಮಾತ್ರ ಕಾಲೇಜು ತಲುಪುತ್ತಾರೆ, ಅದಕ್ಕಾಗಿ ಅವರು ಗಂಟೆಗಟ್ಟಲೆ ಸಮಯವನ್ನು ವ್ಯರ್ಥ ಮಾಡಿಕೊಂಡು, ಓದುವ ಸಮಯವನ್ನು ವ್ಯರ್ಥ ಮಾಡಿಕೊಂಡು ಬದುಕು ಕಟ್ಟಿಕೊಳ್ಳಲು ಹೋರಾಡುತ್ತಿದ್ದಾರೆ, ಇದರ ಬಗ್ಗೆ ಜಿಲ್ಲಾಡಳಿತಕ್ಕೆ, ನಗರ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಗಮನಕ್ಕೆ ಬಾರದಿರುವುದು ಶೋಚನೀಯವಾಗಿದೆ.

ಮುಂದಾದರೂ ಈ ವಿದ್ಯಾರ್ಥಿಗಳಿಗೆ ಸೂಕ್ತವಾದ ನಗರ ಸಾರಿಗೆ ಬಸ್ಸುಗಳನ್ನ ಒದಗಿಸಿ, ಅವರ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕರ್ನಾಟಕ ಜ್ಞಾನವಿಧಾನ ಸಮಿತಿಯ ರಾಜ್ಯ ಉಪಾಧ್ಯಕ್ಷ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಡಾ ಎಚ್ ಕೆ ಎಸ್ ಸ್ವಾಮಿಯವರು ವಿನಂತಿಸಿಕೊಂಡಿದ್ದಾರೆ.

ರಸ್ತೆ ಬದಿಯಲ್ಲಿ ನಿಂತು ಶಾಲಾ ವಿದ್ಯಾರ್ಥಿಗಳು, ರಸ್ತೆಯಲ್ಲಿ ಹೋಗಿ ಬರುವ ಗಾಡಿಗಳಿಗೆ ಕೈ ಬೀಸಿ, ಬೇಡಿಕೊಂಡು, ಲಿಫ್ಟ್ ಪಡೆಯುವ ದೃಶ್ಯ ಯಾವುದೇ ನಾಗರೀಕ ಸಮಾಜಕ್ಕೆ ಗೌರವ ತರುವುದಂತದಲ್ಲ. ಬೀದಿಯಲ್ಲಿ ನಿಂತ ಮಕ್ಕಳನ್ನ ತಮ್ಮ ಮಕ್ಕಳೆಂಬ ಭಾವನೆಯಿಂದ ನೋಡಿ–ಕೊಂಡಾಗ, ನಾವು ಖಂಡಿತ ಅವರಿಗೆ ಯಾವುದಾದರೂ ಒಂದು ಗೌರವಾನ್ವಿತವಾದಂತ ಸಾರಿಗೆ ವ್ಯವಸ್ಥೆಯನ್ನು ನೀಡಿ, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕಾಗಿದ್ದು ನಮ್ಮ ಕರ್ತವ್ಯ ಎಂದರು.

ಚಿತ್ರದುರ್ಗ ಎಂದರೆ ಬರೀ ಮಠದಿಂದ ಐಯುಡಿಪಿ ಲೇಔಟ್ ಗೆ ಇರುವ ಒಂದೇ ಒಂದು ರಸ್ತೆಯನ್ನು ಚಿತ್ರದುರ್ಗ ಎಂದು ಕರೆಯಲಾಗುತ್ತಿದೆ, ಚಿತ್ರದುರ್ಗ ವಿಸ್ತಾರವಾಗಿದ್ದರೂ ಸಹ, ನಗರದ ವಿವಿಧ ಭಾಗದಲ್ಲಿರುವ ರಸ್ತೆಗಳಲ್ಲಿ ಓಡಾಡುವ ಜನರು ಆಟೋರಿಕ್ಷಗಳನ್ನ ನಂಬಿ ಬದುಕಬೇಕಾಗಿದೆ, ಆದರೆ ಬಡ ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಹೋಗುವಂತ ವಿದ್ಯಾರ್ಥಿಗಳಲ್ಲಿ, ಆಟೋರಿಕ್ಷಾದಲ್ಲಿ ಹಣ ಪಾವತಿಸಿ ಓಡಾಡುವಷ್ಟು ಶಕ್ತಿ ಇಲ್ಲದಿದ್ದಾಗಿ, ತಾವೇ ದಾರಿಯಲ್ಲಿ ನಿಂತು, ದಾರಿಯಲ್ಲಿ ಹೋಗಿ ಬರುವಾಗ ಗಾಡಿಗಳಿಗೆ ಕೈಬೀಸಿ, ಅವರನ್ನ ಲಿಫ್ಟ್ ಕೇಳುವುದು ಮಾಡುತ್ತಾ ವಿದ್ಯಾರ್ಥಿಗಳು ಗಂಟೆಗಟ್ಟಲೆ ರಸ್ತೆಯಲ್ಲಿ ನಿಂತು, ಜೀವನ ಸಾಗಿಸುತ್ತಿರುವುದನ್ನು ನೋಡಿದರೆ ಯಾರಿಗಾದರೂ ಕರುಣೆ ಉಕ್ಕಿ ಬರುತ್ತದೆ. ನಮ್ಮ ಮಕ್ಕಳು ಆ ರೀತಿ ಬೀದಿಯಲ್ಲಿ ನಿಂತು, ಹೋಗಿ ಬರುವ ಗಾಡಿಗಳಿಗೆ ಕೈಬೀಸಿ, ಅವರ ಕರುಣೆ ಅನುಕಂಪದಿಂದ ನಾವು ಮನೆ ತಲುಪುವುದು ಮಾಡಿದರೆ, ಅದರಷ್ಟು ಹೀನಾಯ ಸ್ಥಿತಿ ಮತ್ತೊಂದಿಲ್ಲ. ಬೇರೆ ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಗೌರವಾನ್ವಿತವಾಗಿ ತಮ್ಮ ಹಣವನ್ನು ಪಾವತಿಸಿ, ನಗರ ಸಾರಿಗೆಯಲ್ಲಿ ಮನೆಗಳಿಗೆ, ಶಾಲೆಗಳಿಗೆ ತಲುಪುತ್ತಿದ್ದಾರೆ ಎಂದರು.ಚಿತ್ರದುರ್ಗದ ವಿದ್ಯಾರ್ಥಿಗಳು ದುರ್ದೈವಿಗಳು, ನತದೃಷ್ಟರು, ಭಾಗ್ಯಹೀನರು, ದೌರ್ಭಾಗ್ಯವರಾಗಿ ಹುಟ್ಟಿ, ಜಿಲ್ಲೆಯಲ್ಲಿ ಯಾವುದೇ ಸೌಕರ್ಯಗಳಿಲ್ಲದೆ, ರಸ್ತೆಯಲ್ಲಿ ಹೋಗಿ ಬರುವ ಗಾಡಿಗಳನ್ನು ಹತ್ತಿ, ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಳ್ಳುತ್ತಿದ್ದಾರೆ ಎಂದರು. ಈ ಜಿಲ್ಲೆಯ ಗೌರವವನ್ನು ನಾವು ಎತ್ತಿ ಹಿಡಿಯಬೇಕಾದರೆ, ಇಂತಹ ಮಕ್ಕಳಿಗೆ ಆದಷ್ಟು ಶೀಘ್ರವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕಾಗಿದೆ, ಅಧಿಕಾರಿಗಳು ಕಣ್ಣು ಮುಚ್ಚಿ, ಕಿವಿ ಮುಚ್ಚಿಕೊಂಡು ಕುಳಿತಂತೆ ಕಾಣುತ್ತಿದೆ, ಎಷ್ಟೇ ಪತ್ರ ಬರೆಯಿರಿ, ಮನವಿ ಸಲ್ಲಿಸಲಿ, ಪತ್ರಿಕೆಗಳಲ್ಲಿ ಬರೆದರೂ ಸಹ, ಚಿತ್ರದುರ್ಗದ ಜನರಿಗೆ ನಗರ ಸಾರಿಗೆ ಸೌಲಭ್ಯವನ್ನು ನೀಡಲೇ ಬಾರದು ಎಂದು ಮನಸ್ಸು ಮಾಡಿ ಕುಳಿತಂತೆ ಕಾಣುತ್ತಿದೆ ಎಂದರು. ಅಧಿಕಾರಿಗಳಿಗೆ ಅದ್ಯಾವ ರೀತಿಯಲ್ಲಿ ಮನವಿ ಸಲ್ಲಿಸಬೇಕು ಎಂಬುದು ಸಾರ್ವಜನಿಕರಿಗೂ ಸಹ ಅರ್ಥವಾಗುತ್ತಿಲ್ಲ,

## ಮಹಾಕುಂಭ...ಪದ ಕೇಳಿದರೆ ರೋಮಾಂಚನವಾಗುತ್ತದೆ..

# ಸಂತೃಪ್ತಿ, ಸ್ವಚ್ಛ ಆಧ್ಯಾತ್ಮದ ಮಹಾ ಕುಂಭಮೇಳ



ಇಂತಹ ಮಹಾಕುಂಭಮೇಳದಲ್ಲಿ ಪಾಲ್ಗೊಳ್ಳೊಕೆ ನನ್ನ ತಮ್ಮನ ಹೆಂಡತಿ ಶ್ವೇತಾ ಮೆಸೇಜ್ ಮಾಡಿ ಅಕ್ಕಾ ಬರ್ತಿಯಾ ಕುಂಭಕ್ಕೆ ಹೋಗೊಣಾ ಎಂದ ತಕ್ಷಣ ಮರುಯೋಚಿಸದೇ ಹೂ ಅಂದು ಬಿಟ್ಟೆ.ನಂತರ ಬಾಸ್ ಗೆ ಕೇಳಿದೆ ಹೋಗಿ ಬಾ ಅಂದರು. ಆಮೇಲೆ ಇಒಗೆ ಕಾಲ್ ಮಾಡಿ ಕೇಳಿದೆ ನಂಗೆ ಕುಂಭದಲ್ಲಿ ಪಾಲ್ಗೊಳ್ಳೊಕೆ ರಜೆ ಬೇಕಿತ್ತು ಸರ್ ಅನುಮತಿ ಕೊಡಿ ಅಂತಾ ಅವರು ಸಹ ಹೂ ಅಂದರು ಆ ನಂತರ ಫ್ಲೈಟ್ ಟಿಕೇಟ್ ಬುಕ್ ಆಯ್ತು ಹೊರಡೋದು ಕನಫರ್ಮ್ ಆಯ್ತು.ಹೀಗೆ ದೊರಕಿದ ಈ ಭಾಗ್ಯ ನಂಗೆ ಸಿಕ್ಕ ಯೋಗ ಎಂದೇ ಭಾವಿಸಿರುವೆ. ನಮ್ಮ ಸ್ನೇಹಿತರ ಅನುಭವ ಮಂಟಪ ಎನ್ನೋ ಗ್ರೂಪ್ ನಲ್ಲಿ ಸ್ನೇಹಿತರಾದ ಗಿರೀಶ್ ಅವರು ಒಂದು ಮೆಸೇಜ್ ಮಾಡಿದ್ದರು ಈ ಕುಂಭಕ್ಕೆ ಹೊರಟವರು ಭಕ್ತಿಗಾಗಿಯೋ,ಮುಕ್ತಿಗಾಗಿಯೋ,ನೆಮ್ಮದಿಗಾಗಿಯೋ ಯಾವುದಕ್ಕಾಗಿ ಹೋಗುತ್ತಿದ್ದಾರೆಂದು.ನಾ ಹೊರಟಾಗ ಈ ಮೂರೂ ಯೋಚನೆ ಬರಲಿಲ್ಲಾ ಅವಕಾಶ ಸಿಕ್ಕಿದೆ ಹೋಗಬೇಕು ಅಷ್ಟೇ ಎಂದು ಹೊರಟದ್ದು..

ನಂಗೆ ಯಾವುದರ ಆಲೋಚನೆಯೂ ಇರಲಿಲ್ಲಾ ಆದರೆ ಮನೆಯಲ್ಲಿ ಹೆಣ್ಣುಮಕ್ಕಳಷ್ಟೇ ಹೊರಟಿರುವಿರಿ ಬಹಳ ಜನ ಇರ್ತಾರೆ ಹುಶಾರಾಗಿ ಹೋಗಿಬನ್ನಿ ಅಂದರು ಅವರಿಗೂ ಏನೋ ಹೇಗೋ ಅನ್ನೋ ಆಲೋಚನೆ.ಮಂಗಳವಾರ ಮಧ್ಯಾಹ್ನ 1.40 ಕ್ಕೆ ವಾರಣಾಸಿ ತಲುಪಿದೆವು.ಃಊಗ ಖಖಖ ಗೆಸ್ಟ್ ಹೌಸ್ ನಲ್ಲಿ ಊಟ ಮಾಡಿದೆವು.ಒಟ್ಟು 14 ಜನರ ಟೀಂ. ಅಲ್ಲಿದ್ದ ಎಲ್ಲರೂ ಸಹ ಜ್ಞಾನ ಹಾಗೂ ಅನುಭವ ತುಂಬಿದ ಸಹೃದಯಿಗಳು ಅವರ ಸಂಘ ದೊರಕಿದ್ದು ಸಹ ಹೆಮ್ಮೆ ತರಿಸಿತು ನಂಗೆ. ಊಟದ ನಂತರ ಗಂಗಾರತಿ ನೋಡೊಕೆ ಹೊರಟೆವು. ಅಲ್ಲಿ ಲೋಕಲ್ ಅಡ್ಡಾಡೊಕೆ ರಿಕ್ಷಾಗಳು ಸಾಕಷ್ಟು ಇರುತ್ತವೆ .20/- ರಿಂದ 50/- ವರೆಗೆ ಒಬ್ಬರಿಗೆ ಚಾರ್ಜ್ ಮಾಡ್ತಾರೆ.ಹೊಟೆಲ್ ನಿಂದ ಅಸ್ಸಿಘಾಟ್ ಗೆ ಆಟೋದಲ್ಲಿ ಹೋಗಿ ಅಲ್ಲಿಂದ ಈಗಾಗಲೇ ಬುಕ್ ಮಾಡಿದ್ದ ವಿವೇಕಾನಂದ ಕ್ರೂಜ್ ನಲ್ಲಿ ಗಂಗಾವಿಹಾರ ಆರಂಭವಾಯಿತು.ಪವಿತ್ರ ಗಂಗೆಯ ನೋಡೊದೆ ಒಂದು ಪುಣ್ಯ. ಕ್ರೂಜ್ ಆರಂಭವಾಗಿ ನದಿ ತೀರದ ಎಲ್ಲಾ ಘಾಟ್ ಗಳನ್ನು ಸುತ್ತುವರೆದು ನಮೋ ಘಾಟ್ ಹತ್ತಿರ ಸ್ವಲ್ಪೊತ್ತು ನಿಲ್ಲಿಸಿತು.ಮಾನ್ಯ ಪ್ರಧಾನಿಗಳು ಉದ್ಘಾಟಿಸಿದ ಘಾಟ್ ಅದಾಗಿದ್ದು ನಮಸ್ಕಾರ ಮಾಡುವ ದೊಡ್ಡ ಗಾತ್ರದ ಒಂದು ಹಾಗೂ ಸಣ್ಣ ಗಾತ್ರದ 3 ನಮಸ್ಕರಿಸುವ ಕಲಾಕೃತಿಗಳು ಆ ಘಾಟ್ ಗಳಿದ್ದವು.ಒಟ್ಟು 18 ಹಳೆಯ ಘಾಟ್ ಗಳು ಪ್ರಧಾನಿಯವರು ಇತ್ತೀಚಗೆ ಉದ್ಘಾಟಿಸಿದ 4 ಹೊಸ ಘಾಟಗಳಿವೆ ಎಂದು ಅಲ್ಲಿಯವರು ತಿಳಿಸಿದರು. ಅಲ್ಲಿ ಗಂಗಾರತಿ ಗಂಗಾ ಘಾಟನಲ್ಲಿ ಇರುತ್ತದೆ.ಮಣಿಕರ್ಣಿಕಾ ಘಾಟ್ ,ಹರಿಶ್ಚಂದ್ರ ಘಾಟ್ ಗಳನ್ನು ನೋಡಲಾಯಿತು.ಗಂಗಾರತಿಯು ಸಂಜೆ 6 ರಿಂದ 7 ಘಂಟೆಯವರೆಗೆ ಮಾತ್ರ ಇರುತ್ತದೆ.ಅದೊಂದು ಅಧ್ಬುತ ಅನುಭವ.ಸಾದ್ಯವಾದವರು ಬೇಗ ಹೋಗಿ ಸಮಯ ಇರುವವರು ಗಂಗಾ ಘಾಟ್ ನಲ್ಲಿ 3.30ಟಿಟ ನಿಂದಲೇ ಕೂತಲ್ಲಿ ಹತ್ತಿರದಿಂದ ಗಂಗಾರತಿಯ ದರ್ಶನ ಮಾಡಬಹುದು.ಘಾಟ್ ತುಂಬಾ ಕಿಕ್ಕಿರಿದ ಜನಸಂದಣಿ ಇರುತ್ತದೆ. ಒಂದು ಗಂಟೆಯ ಆರತಿಯನ್ನು ನೋಡಬಹುದು ಹಾಗೆ ಬೋಟ್ ಅಥವಾ ಕ್ರೂಜ್ ಗಳಲ್ಲಿ ಎಲ್ಲಾ ಘಾಟ್ ಗಳನ್ನು ದೀಪಾಲಂಕಾರವನ್ನು ನೋಡಬಹುದು.ಭೂಮಿ ಮೇಲಿನ ಸ್ವರ್ಗ ಅದಾಗಿರುತ್ತದೆ.ಅದು ಮುಗಿಸಿಕೊಂಡು ಕಾಶಿಯ ಕಾಲಭೈರವ ದರ್ಶನಕ್ಕೆ ತೆರಳಿದೆವು ಅಲ್ಲಿ ಸ್ವಲ್ಪ ಗೊಂದಲವಾಗುವ ಸಂಭವವಿರುತ್ತೆ. ಎರೆಡು ಮೂರು ಕಡೆಯಿಂದ ಜನರು ಸಾಲಾಗಿ ದರ್ಶನಕ್ಕಾಗಿ ನಿಂತಿರುತ್ತಾರೆ.ನಾವು ಒಂದು ಸಾಲಿನಲ್ಲಿ ಹೋದೆವು ಆದರೆ ಆ ಸಾಲಿನಲ್ಲಿ ಮುಂದೆ ಹೋಗೊಕೆ ಅವಕಾಶ ಇರಲಿಲ್ಲಾ ಅವರು ಬೇರೊಂದು ಕಡೆ ಹೋಗಿ ಸೇರಿಕೊಳ್ಳೊಕೆ ತಿಳಿಸಿದರು .ಅಲ್ಲಿ ಹೋದರೆ ಮತ್ತೊಂದು ದೊಡ್ಡ ಸಾಲು ಅಲ್ಲಿತ್ತು ಅಲ್ಲಿ ಸೇರಿಕೊಳ್ಳೊಕೆ ಅವಕಾಶಕೊಡಲಿಲ್ಲಾ.ಇಲ್ಲಿ ಆಗಲೇ ಅರ್ಧಗಂಟೆ ಸಾಲಲ್ಲಿ ನಿಲ್ಲಲಾಗಿತ್ತು ಮತ್ತೆ ಹೊಸದಾಗಿ ನಿಲ್ಲೊಕೆ ಕಷ್ಟವಾಗುತ್ತಿತ್ತು.ಮತ್ತೆ ನಾವು ನಿಂತಿದ್ದ ಸರದಿ ಸಾಲಿನ ಜಾಗಕ್ಕೆ ಬಂದರೆ ಅದು ಆಗಲೇ ಬಂದ್ ಆಗಿತ್ತು.ಅಷ್ಟರಲ್ಲಿ ನಮ್ಮವರು ಆಗಲೇ ಮೊದಲು ತಿಳಿಸಿದ ಇನ್ನೊಂದು ಸಾಲಿನಲ್ಲಿ ನಿಂತು ಕರೆದರು ವಾಪಸ್ ಹೋಗಿ ಅದಕೆ ಸೇರಿಕೊಂಡು ಒಂದು ಗಂಟೆಯ ಸರದಿಯಲ್ಲಿ ಸಾಗಿ ಕಾಲಭೈರವನ ದರ್ಶನ (ಪ್ರತೀತಿ ಪ್ರಕಾರ ಮೊದಲು ಕಾಲಭೈರವನ ದರ್ಶನ ಮಾಡಬೇಕಂತೆ) ಮಾಡಿದೆವು .ತುಂಬಾ ಚೆನ್ನಾಗಿ ದೇವರ ದರ್ಶನವಾಯಿತು. ದರ್ಶನ ಪಡೆದು ಮನಸ್ಸಲ್ಲಿ ಏನೋ ತೃಪ್ತಭಾವನೆ ಮೂಡಿತು. ಇಲ್ಲಿ ಕಾಶಿಗೆ ಹೋಗುವವರು ಗಮನಿಸಬೇಕಾದ ಒಂದು ಅಂಶವೆಂದರೆ ಕೆಲ ಆಟೋ ರಿಕ್ಷಾಗಳಿಗೆ ಕೆಲವು ಕಡೆ ಮಾತ್ರ ಪ್ರವೇಶ ಇರುತ್ತದೆಯಂತೆ ಅವರು ಅವರಿಗೆ ಅವಕಾಶ ಇಲ್ಲದ ಬೀದಿಗಳಲ್ಲಿ ಸಂಚರಿಸೊಕೆ ಅವಕಾಶ ಇರೊಲ್ಲಾ ಇದು ತಿಳಿಯದೆ ನಾವು ಹತ್ತಿದ ಆಟೋ ಒಂದು ಗಂಟೆಲಿ ಹೋಗೊ ದಾರಿಯನ್ನು ಎರೆಡುಗಂಟೆಯಲ್ಲಿ ಕರೆದುಕೊಂಡು ಹೋದ.ಇದನ್ನು ಗಮನಿಸಿ ಆಟೋ ಹತ್ತೊದು ಒಳ್ಳೇದು.


ಬುಧವಾರ ನಾವೆಲ್ಲಾ ಕಾತುರದಿಂದ ಕಾದಿದ್ದ ಹಾಗೂ ಈ ಪ್ರಯಾಣದ ಮುಖ್ಯ ಉದ್ದೇಶ ಪ್ರಯಾಗ ರಾಜ್ ಗೆ ಪಯಣ ಆರಂಭವಾಯಿತು.ಬೆಳಗ್ಗೆ 6 ಕ್ಕೆ ವಾರಣಾಸಿಯಿಂದ 16 ಜನರ ಟೀಂನೊಂದಿಗೆ ಕೂತೂಹಲದ ,ಮನಸ್ಸಿನ ಯಾವುದೋ ಮೂಲೆಯಲ್ಲಿ ಅಡಗಿದ್ದ ಆತಂಕದ ,ಬಿಟ್ಟ ಕಂಗಳ ಕೌತುಕದ ಪ್ರಶ್ನೆಗೆ ಉತ್ತರಿಸುವ ಪ್ರಯಾಗವನ್ನು 8.30 ಕ್ಕೆ ತಲುಪಿದೆವು. ಅಲ್ಲಿ ಕಾಲಿಟ್ಟ ತಕ್ಷಣ ಜೀವನದ ಅತ್ಯಂತ ಪುಣ್ಯದ ಕ್ಷಣ ಅದಾಗಿತ್ತು.

ಜನರೆಲ್ಲಾ ಹೇಳೊ ಹಾಗೆ ,ಮಾಧ್ಯಮಗಳು ಬಿಂಬಿಸೊ ಹಾಗೆ ಅಲ್ಲಿ ಕಾಲಿಡೊಕೆ ಆಗದ ಜನಜಂಗುಳಿ ಅನ್ನಿಸುವ ಹಾಗೆ ಇರಲಿಲ್ಲಾ.ದೊಡ್ಡ ಗಾಡಿಗಳನ್ನು ಸರ್ಕಲ್ ನಲ್ಲೇ ತಡೆಯುತ್ತಾರೆ. ಅಲ್ಲಿಂದ ಆಟೋ ರಿಕ್ಷಾದಲ್ಲಿ ಸಂಗಮಕ್ಕೆ ತೆರಳಿದೆವು ಆಟೋದಲ್ಲಿ ಇಳಿದು ಒಂದು ಕಿ.ಮೀ.ನಷ್ಟು ನಡೆದುಹೋದೆವು ಅಲ್ಲಿ ಸಂಗಮ ಸ್ನಾನ ಜಾಗ ತಲುಪಿದೆವು .ಹೋಗುವ ದಾರಿಯುದ್ದಕ್ಕೂ ಸ್ವಚ್ಛತೆ ಕಾಪಾಡಿದ ರೀತಿ ನೋಡಿ ಆಶ್ಚರ್ಯವಾಯಿತು .ನಮ್ಮ ಹಳ್ಳಿಗಳಲ್ಲಿ ಒಂದು ಜಾತ್ರೆ ಮಾಡಿದರೆ ಸಾಕು ಕಾಲಿಡೊಕೆ ಆಗದಷ್ಟು ಕಸ ಸುರಿದಿರುತ್ತಾರೆ. ಆದರೆ ನೂರಾರು ಕೋಟಿ ಜನ ಬಂದುಹೋದ ಸ್ಥಳದಲ್ಲಿ ಒಂದು ಸಣ್ಣ ಪ್ಲಾಸ್ಟಿಕ್ ಪ್ಯಾಕೆಟ್ ಆಗಲಿ,ಕಸವಾಗಲಿ ಕಾಣಲಿಲ್ಲಾ.ದಾರಿಯುದ್ದಕ್ಕೂ ಸಾವಿರಕ್ಕೂ ಹೆಚ್ಚು ಆಶ್ರಮಗಳ ಬಿಡಾರಗಳು ಉಳಿದುಕೊಳ್ಳೊಕೆ ಟೆಂಟ್ ಗಳು,ಪ್ರತಿಯೊಂದು ಬಿಡಾರದಲ್ಲೂ ಊಟದ ವ್ಯವಸ್ಥೆ,ಬಿಡಾರದ ಹೊರಗಡೆಯೂ ಭಕ್ತರು ಪ್ರಸಾದ ವಿತರಣೆ ವ್ಯವಸ್ಥೆ ಮಾಡಿರುತ್ತಾರೆ. ಅಂತಹ ಪ್ರಸಾದದಲ್ಲೇ ನಾವು ಮಧ್ಯಾಹ್ನ ಊಟ ಎರೆಡು ರೋಟಿ ಮತ್ತು ದಾಲ್ ಊಟವಾಡಿದೆವು.ಸ್ನಾನಘಟ್ಟಗಳಲ್ಲಿ ಬ್ಯಾರಿಕೇಡ್ ಹಾಕಿ ಜನರು ಸಂಗಮ ಸ್ನಾನವನ್ನು ಯಾವುದೇ ಭೀತಿಯಿಲ್ಲದೇ ಮಾಡೊದಕ್ಕೆ ಅವಕಾಶ ಮಾಡಿಕೊಡಲಾಗಿದೆ.ಎಲ್ಲರೂ ಭಾವಿಸುವ ಹಾಗೆ ಕೊಟ್ಯಾಂತರ ಜನ ಸಂಗಮ ಸ್ನಾನ ಮಾಡಿದ್ದರೂ ಕೂಡ ಆ ನೀರಿನ ಸ್ವಚ್ಛತೆ ನಮ್ಮನ್ನು ಮತ್ತೊಮ್ಮೆ ಆಶ್ಚರ್ಯ ಚಕಿತರನ್ನಾಗಿ ಮಾಡಿತು.ಬ್ಯಾರಿಕೇಡ್ ಆಕಡೆ ಬೋಟ್ ಗಳು ಇರುತ್ತವೆ.ಅದರಲ್ಲಿ ಪೊಲಿಸ್ ನಿಂತಿರುತ್ತಾರೆ ಯಾವುದೇ ಕಾರಣಕ್ಕೂ ಬ್ಯಾರಿಕೇಡ್ ದಾಟಿ ಹೋಗಿ ನೀರಲ್ಲಿ ಇಳಿಯೊಕೆ ಅವಕಾಶ ಇಲ್ಲಾ .ಹಾಗಾಗಿ ನೀರಿನ ಭಯವಿಲ್ಲದೇ ಸ್ನಾನ ಮಾಡಬಹುದು.ನೀರು ತುಂಬಾ ಸ್ವಚ್ಛವಾಗಿದೆ.ಸ್ವಚ್ಛತೆಗೆ ಇನ್ನೊಂದು ಹೆಸರೇ ಈ ಕುಂಭಮೇಳ.ಅಲ್ಲಿ ನೀವು ಪೂಜೆ ಮಾಡಿ ಬಿಟ್ಟ ಹೂ,ದೀಪ,ಉಳಿದ ಪೂಜಾ ಸಾಮಾಗ್ರಿಯನ್ನು ಅಲ್ಲಿನ ಪೌರ ಕಾರ್ಮಿಕರು ಆವಾಗಾವಾಗ ಸ್ವಚ್ಛ ಮಾಡ್ತಾನೆ ಇರುತಾರೆ.ಈ ಸ್ವಚ್ಛತೆಯೇ ಒಂದು ದೊಡ್ಡ ಆಶ್ಚರ್ಯ ಮೂಡಿಸುತ್ತದೆ.ನೆಮ್ಮದಿಯಾಗಿ ಸಂಗಮ ಸ್ನಾನ ಮಾಡಿ ಹೊರಬಂದಲ್ಲಿ ಬಟ್ಟೆ ಬದಲಾಯಿಸಲು ಅಲ್ಲಲ್ಲಿ ತಾತ್ಕಾಲಿಕ ಶೆಡ್ ಗಳಿವೆ ಅಲ್ಲಿ ಬದಲಾಯಿಸಬಹುದು. ಹಾಗೆ ಶೌಚಾಲಯ ವ್ಯವಸ್ಥೆ ಯೂ ಉತ್ತಮವಾಗಿದೆ.ಗಂಟೆಗೊಮ್ಮೆ ಸ್ವಚ್ಛತೆ ಮಾಡುತಾರೆ.ಬಳಸುವ ಜನರೂ ಸಹ ಸ್ವಚ್ಛತೆಗೆ ಸಹಕರಿಸಬೇಕು.ನಾವು ಆ ವ್ಯವಸ್ಥೆಗೆ ನೀಡಬಹುದಾದ ನಮ್ಮ ಕೊಡುಗೆ ಅದೊಂದೇ.. ಸಂಗಮ ಸ್ನಾನದ ನಂತರ ನೀವು ನೋಡ ಬಯಸುವ ಅಖಾಡಗಳಿಗೆ ಭೇಟಿ ಮಾಡಬಹುದು. ಸೆಕ್ಟರ್ ವಾರು ವಿಶೇಷತೆ ಗಳಿವೆ.ಸೆಕ್ಟರ್ 20 ರಲ್ಲಿ ನಾಗಸಾಧುಗಳು ,ಸಂತರು ಸಿಗುತ್ತಾರೆ. ಅಲ್ಲಿಗೆ ಹೋಗೊಕೆ ಆಟೋಗಳಿರುತ್ತವೆ. ಒಂದು ಗಮನಿಸಬೇಕಾದ ಅಂಶವೆಂದರೆ ಪ್ರಯಾಣ ಬಯಸುವವರು ತಾವು ಯಾವ ಸೆಕ್ಟರ್ ಭೇಟಿ ಮಾಡಬೇಕೆಂಬುದರ ಬಗ್ಗೆ ಒಂದು ಯೋಜನೆ ತಯಾರಿಸಿಕೊಂಡು ಹೊರಡಿ.ಒಂದೊಂದು ಸೆಕ್ಟರ್ ಕಿ.ಮೀ. ದೂರವಿರುವ ಕಾರಣ ಆಟೋಗಳು ಬಹಳ ದೂರದ ಸೆಕ್ಟರ್ ಗೆ ಬರೊಲ್ಲಾ. ತಾವು 3&7&20 ನೇ ಸೆಕ್ಟರ್ ಗೆ ಭೇಟಿ ಮಾಡಬೇಕೆಂದುಕೊಂಡಿದ್ದರೆ ಅಲ್ಲಿ ಸೆಕ್ಟರ್ ಗಳ ದೂರವನ್ನು ಆಟೋದವರಿಗೆ ಕೇಳಿ ಮೊದಲು ಯಾವ ಸೆಕ್ಟರ್ ಬರುತ್ತೆ ಅದಕೆ ಭೇಟಿ ನೀಡಿ ಮುಂದಿನದಕೆ ಹೋಗಬಹುದು. ಹೀಗಾಗಿ ತುಂಬಾ ದೂರ ನಡೆಯಬೇಕೆಂಬ ದೂರುಗಳೇನು ಇವೆ ಅವು ತಪ್ಪುತ್ತವೆ.ನಾವು ಪ್ರಯಾಗದಲ್ಲಿ ಇಡೀ ದಿನ ನಡೆದದ್ದು ಕೇವಲ 7ಕಿಮಿ ಮಾತ್ರ.ಹಾಗಾಗಿ ಯಾವುದೇ ಗೊಂದಲ ,ಸಂದೇಹ ಇಲ್ಲದ ಎಲ್ಲಾ ವಯಸ್ಕರು,ಹಿರಿಯರು ಹೋಗಿಬರಬಹುದು ಈಗಾಗಲೇ ತಿಳಿಸಿದಂತೆ ಎಲ್ಲಾ ಬಿಡಾರಗಳಲ್ಲೂ ಅನ್ನಸಂತರ್ಪಣೆ ಇರುತ್ತದೆ. ಇರೊದಕ್ಕೆ ಟೆಂಟ್ ಗಳಿವೆ.ಯಾವುದಕ್ಕೂ ಕೊರತೆಯಿಲ್ಲಾ.ಪ್ರಯಾಗದಲ್ಲಿ ಸಾಕಷ್ಟು ದೇವಸ್ಥಾನಗಳಿವೆ ನೋಡುವ ಸ್ಥಳಗಳಿವೆ.ಆದರೆ ತಾವುಗಳು ಮೊದಲೇ ಯೋಜನೆ ರೂಪಿಸಿಕೊಂಡು ಎಷ್ಟು ದಿನದ ಪ್ರಯಾಣ ,ಎಷ್ಟು ದಿನಪ್ರಯಾಗದಲ್ಲಿರ್ತಿರಾ ಅನ್ನೋದರ ಆಧಾರದ ಮೇಲೆ ಎಲ್ಲದನ್ನೂ ನೋಡುವ ಪ್ರಯತ್ನ ಮಾಡಿ.ಒಂದು ದಿನಕ್ಕೆ ಮಾತ್ರ ಹೋಗೊದಾದರೆ ಮೊದಲು ಕುಂಭಸ್ನಾನ,ಅಖಾಡಗಳ ಭೇಟಿ, ಎಲ್ಲರೂ ನೀಡಬಯಸುವ ಹಾಗೂ ಆಶೀರ್ವಾದ ಪಡೆಯಲು ಬಯಸುವ ನಾಗ ಸಾಧುಗಳ ಸೆಕ್ಟರ್ 20 ಕ್ಕೆ ಭೇಟಿ ನೀಡಿ ಆ ಸೆಕ್ಟರ್ ತುಂಬಾ ದೊಡ್ಡದಿದೆ.ಅದೆಲ್ಲಾ ಮುಗಿಸಿಕೊಂಡು ತಾವು ಉಳಿದುಕೊಳ್ಳೊಕೆ ವ್ಯವಸ್ಥೆ ಮಾಡಿಕೊಂಡ ಜಾಗಕ್ಕೆ ಹೊರಡಬಹುದು.ಸಾರಿಗೆ ವ್ಯವಸ್ಥೆ ತುಂಬಾ ಉತ್ತಮವಾಗಿದೆ.ಎಂತವುದೇ ಟ್ರಾಫಿಕ್ ಇದೆ ಅನಿಸಿದರು ಕೂಡ ನೀವು ಕಾಯುವ ಸಂಧರ್ಭ ಬರೊದಿಲ್ಲಾ ಅಷ್ಟರಮಟ್ಟಿಗೆ ಗಾಡಿಗಳು ಮುಂದೆ ಸಾಗುವ ವ್ಯವಸ್ಥೆ ಮಾಡಲಾಗಿದೆ.ದಯಮಾಡಿ ಮನಸ್ಸಿಗೆ ಹೋಗಬೇಕೆನಿಸಿದಲ್ಲಿ ಹೊರಟುಬಿಡಿ ಮತ್ತೊಮ್ಮೆ ಈ ಅವಕಾಶ ಬಂದಾಗ ನಾವು ಇರೋದಿಲ್ಲಾ.ಹಾಗಾಗಿ ಇದೊಂದು ಧಾರ್ಮಿಕ ಕಾರ್ಯಕ್ರಮ ಅಂತಾನೋ ಅಥವಾ ಪುಣ್ಯ ,ಮೋಕ್ಷ ಸಿಗುತ್ತೋ ಅಂತಾನೋ ಹೊರಡಿ ಅಥವಾ ಇದೆಲ್ಲಾ ಬೇಡ ಎನಿಸಿದರೆ ಕೊಟ್ಯಾಂತರ ಜನ ಸೇರುವ ಒಂದು ಬೃಹತ್ ಮೇಳ ಅದರ ವ್ಯವಸ್ಥೆ,ಸ್ವಚ್ಛ ತೆಯ ನಿರ್ವಹಣೆ ನೋಡಬಯಸಲಾದರೂ ಹೋಗಿಬನ್ನಿ.

ಹಾಗೆ ಇನ್ನೊಂದು ಕೇವಲ ಮಹಿಳೆಯರ ತಂಡಗಳು ಕೂಡ ಯಾವುದೇ ಭಯವಿಲ್ಲದೇ ಹೋಗಿಬರಬಹುದು..

ಮುಂದಿನ ಬರಹದಲ್ಲಿ ವಾರಣಾಸಿಯಲ್ಲಿ ಕಳೆದ ಮತ್ತೊಂದು ಅನುಭವ

-ವಿದ್ಯಾ ಬಡದಾಳ್.



## ಮೈಲಿಮನೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಸದಸ್ಯರುಗಳ ಆಯ್ಕೆ




**ಚಿಕ್ಕಮಗಳೂರು:** ಚಿಕ್ಕಮಗಳೂರು ತಾಲ್ಲೂಕಿನ ಮೈಲಿಮನೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ನಿ, ಆಡಳಿತ ಮಂಡಳಿ ಚುನಾವಣೆಯಲ್ಲಿಎಂ.ಎಸ್‌ಜಯಚಂದ್ರ, ಎಂ.ಜಿ ಪೂರ್ಣೇಶ್, ಷಕೀಲ್‌ಅಹಮದ್, ಹಫೀಜುರ್‌ರೆಹಮಾನ್, ಮೊಹಮದ್‌ತಾಹೇರ್‌ಏಕ್ಬಾಲ್, ಡಿ.ಬಿ ಬೀನ ಅನುರಾಜೇಗೌಡ, ಸರ್ವರಿ ಬೇಗಮ್, ಎಂ ದೇವರಾಜ್, ರವರುಚುನಾವಣೆಯಲ್ಲಿ ಸ್ಪರ್ಧಿಸಿ ಹೆಚ್ಚು ಮತಗಳಿಸುವ ಮೂಲಕ ಸಂಘದ ಆಡಳಿತ ಮಂಡಳಿ ಸದಸ್ಯರಾಗಿಆಯ್ಕೆಯಾಗಿದ್ದಾರೆಕಿಶನ್ ಜಿ.ಸಿ., ಅರ್ಪಿತ ಪ್ರದೀಪ್ ಮತ್ತು ಶಫೀಕ್‌ಅಹಮದ್‌ರವರುಅವಿರೋಧವಾಗಿಆಯ್ಕೆಗೊಂಡಿದ್ದಾರೆಎಂದುಮೈಲಿಮನೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಮೈಲಿಮನೆ ಪೂರ್ಣೇಶ್‌ತಿಳಿಸಿದರು.

## ಶ್ರೀ ಶಕ್ತಿ ವಿಶ್ವಕರ್ಮಕೈಗಾರಿಕಾ ವಿವಿದ್ದೊದೇಶ ಸಹಕಾರ ಸಂಘದ



**ಚಿಕ್ಕಮಗಳೂರು:** ಶ್ರೀ ವಿಶ್ವಕರ್ಮ ಸಭಾ ಭವನದಲ್ಲಿಜ. 18 ರಂದುನಡೆದ ಚಿಕ್ಕಮಗಳೂರು ಶ್ರೀ ಶಕ್ತಿ ವಿಶ್ವಕರ್ಮಕೈಗಾರಿಕಾ ವಿವಿದ್ದೊದೇಶ ಸಹಕಾರ ಸಂಘ ನಿಯಮಿತಚುನಾವಣೆಯಲ್ಲಿ ಸಂಘದ ನೂತನಅಧ್ಯಕ್ಷರಾಗಿ ಬಿ.ಪಿ ರತೀಶ್ ಹಾಗೂ ಉಪಾಧ್ಯಕ್ಷರಾಗಿ ಸಿ.ಜೆ ಬಾಲಕೃಷ್ಣ ಮತ್ತುಎಂ. ಜೆ ಮಹೇಶ್‌ಆಚಾರ್, ಚಂದ್ರಶೇಖರ್.ಬಿ, ಎಂ.ಜೆಚಂದ್ರಶೇಖರ್, ಓಂಕಾರ್ ಮೂರ್ತಿ, ಜಗದೀಶ್‌ಆಚಾರ್, ಶಂಕರಯ್ಯಆಚಾರ್, ಪರಮೇಶ್‌ಆಚಾರ್, ವೀಣಾ, ಸೂರ್ಯ, ಗೋವಿಂದ್, ಉಮಾಶಂಕರ್, ಬಾಬು, ಅಶ್ವಿಕ್ ಆಚಾರ್ಯ, ವೀರಭದ್ರಾಚಾರ್ ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆಎಂದುಜಿಲ್ಲಾ ವಿಶ್ವ ಬ್ರಾಹ್ಮಣ ಸಮಾಜ ಸೇವಾ ಸಭಾಧ್ಯಕ್ಷರಾದಉಮಾಶಂಕರ್ ತಿಳಿಸಿದರು.

## ಗಣರಾಜ್ಯೋತ್ಸವ ಆಚರಣೆ: ಉಸ್ತುವಾರಿ ಸಚಿವರಿಂದ ಧ್ವಜಾರೋಹಣ



**ಹಾಸನ:** ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎನ್. ರಾಜಣ್ಣ ಅವರು ಧ್ವಜಾರೋಹಣ ನೆರವೇರಿಸಿ, ಗೌರವ ರಕ್ಷೆ ಸ್ವೀಕರಿಸಿ, ಗಣರಾಜ್ಯೋತ್ಸವ ಸಂದೇಶ ನೀಡಿದರು.ಸಂಸದರಾದ ಶ್ರೇಯಸ್ ಪಟೇಲ್, ಶಾಸಕರಾದ ಸ್ವರೂಪ್ ಪ್ರಕಾಶ್, ನಗರ ಸಭೆ ಅಧ್ಯಕ್ಷರಾದ ಚಂದ್ರೇಗೌಡ, ಜಿಲ್ಲಾಧಿಕಾರಿ ಸತ್ಯಭಾಮ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್.ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಕೆ.ಟಿ.ಶಾಂತಲಾ ಮತ್ತಿತರರು ಹಾಜರಿದ್ದರು. ಜನರ ಮೆಚ್ಚುಗೆಗೆ ಪಾತ್ರವಾದ ಸಾಂಸ್ಕೃತಿಕ ಕಾರ್ಯಕ್ರಮ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ವೈಭವ ಯುತವಾಗಿ ಮೂಡಿಬಂದಿತು. ಜನರ ಮೆಚ್ಚುಗೆಗೆ ಪಾತ್ರವಾಯಿತು. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರಿಗೆ ಸನ್ಮಾನಜಿಲ್ಲಾಡಳಿತದವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರನ್ನು ಸನ್ಮಾನಿಸಲಾಯಿತು.

## ರಾಜನಹಳ್ಳಿ ಹನುಮಂತಪ್ಪ ವೃತ್ತದಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ



**ದಾವಣಗೆರೆ** : ಇಂದು 76ನೇ ಗಣರಾಜ್ಯೋತ್ಸವವನ್ನು ವಂದೆ ಮಾತರಂ ತಂಡದಿಂದ 29 ನೇ ವಾರ್ಡಿನ ಅಂಗನವಾಡಿ ಮಕ್ಕಳೊಂದಿಗೆ ಆಚರಿಸಲಾಯಿತು. ನೆಟ್ ಒಳಗೆ 29ನೇ ವಾರ್ಡಿನ ರೇಣುಕಾ ಶ್ರೀನಿವಾಸ್ ಧ್ವಜಾರೋಹಣವನ್ನು ನೆರವೇರಿಸಿದರು ಸಂವಿಧಾನ ಮತ್ತು ಸ್ವಾತಂತ್ರ್ಯ ಹೋರಾಟಗಾರ ನಾಯಕರ ಬಗ್ಗೆ ಮಾತನಾಡಿದರು .

ನಿವೃತ್ತ ಯೋಧ ರಾಘವೇಂದ್ರ ಎನ್. ನಮಗೆ ನಿಜವಾದ ಹಬ್ಬಗಳೆಂದರೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ಎಂದು ಹೇಳುತ್ತಾ ಪುಟ್ಟ ಮಕ್ಕಳ ವೇಷ - ಭೂಷಣಗಳನ್ನು ಕಂಡು ರಾಷ್ಟ್ರ ನಾಯಕರನ್ನೇ ನೋಡಿದ ಹಾಗೆ ಆಯ್ತು ಎಂದು ಮಾತನಾಡಿದರು.

ಪಟ ಪುಟ್ಟ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷ ಧರಿಸಿ ಸುಂದರವಾಗಿ ನೃತ್ಯವನ್ನು ಮಾಡಿದರು.

ಈ ಕಾರ್ಯಕ್ರಮಕ್ಕೆ ನಿಟ್ಟುವಳ್ಳಿಯ 29ನೇ ವಾರ್ಡಿನ ಸದಸ್ಯ ರೇಣುಕಾ ಶ್ರೀನಿವಾಸ್, ನಿವೃತ್ತ ಯೋಧ ರಾಘವೇಂದ್ರಎನ್.,ವಾರ್ಡಿನ ಹಿರಿಯ ಶಿಕ್ಷಕರು, ಅಂಗನವಾಡಿಯ ಶಿಕ್ಷಕರು, ನಾಗರಿಕರು ಭಾಗಿಯಾಗಿದ್ದರು.

## ಜಿಲ್ಲಾಡಳಿತ ಭವನದಲ್ಲಿ ಹುತಾತ್ಮ ದಿನಾಚರಣೆ

### ಸಂಗೊಳ್ಳಿ ರಾಯಣ್ಣನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಸಚಿವ ಎಚ್.ಕೆ.ಪಾಟೀಲ



**ಗದಗ** : ಹುತಾತ್ಮಕ ದಿನಾಚರಣೆ ಅಂಗವಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಜಿಲ್ಲಾಡಳಿತ ಭವನದ ಅಡಿಟೋರಿಯಂ ಹಾಲನಲ್ಲಿ ರವಿವಾರದಂದು ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರಸಾಬ ಬಬರ್ಚಿ,ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ,ಜಿ.ಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಭರತ್ ಎಸ್ ,ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ,ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಎ.ಸಿ ಗಂಗಪ್ಪ ಗಣ್ಯರಾದ ವಾಸಣ್ಣ ಕುರಡಗಿ,ಬಿ.ಬಿ.ಅಸೂಟಿ,ಅಶೋಕ ಮಂದಾಲಿ,ಬಸವರಾಜ ಕಡೇಮನಿ, ಹಾಜರಿದ್ದರು.

## ಆಕರ್ಷಕ ಪಥ ಸಂಚಲನ

**ಹಾಸನ** : ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕೆ.ಎಸ್. ಆರ್.ಪಿ, ಡಿ.ಎ.ಆರ್, ನಾಗರೀಕ ಪೊಲೀಸ್ ತಂಡ ಮಹಿಳಾ ಪೊಲೀಸ್ ತಂಡ, ಗೃಹ ರಕ್ಷಕ ದಳ, ಅರಣ್ಯ ಇಲಾಖೆ ತಂಡ, ಅಬಕಾರಿ ಇಲಾಖೆ ತಂಡ ಎನ್.ಸಿ.ಸಿ, ಸೇವಾದಳ ಹಾಗೂ ಶಾಲಾ ಮಕ್ಕಳು ಸೇರಿದಂತೆ ಒಟ್ಟು 34 ತುಕಡಿಗಳಿಂದ ಆಕರ್ಷಕ ಪಥಸಂಚಲನ ಮೂಡಿಬಂದಿತು.

## ನ್ಯಾಯವೇ ಇದು ?

ದಡ ತೋರಿಸಿ ಸುಳಿಯಲ್ಲಿ
ಮುಳುಗಿಸುವುದಾದರೆ
ಬದುಕುವ ಆಸೆಯನ್ನೇಕೆ
ತೋರಿಸಿದಿರಿ
ಈಜು ಬರದ ನಾನು
ಹರಿಯುವ ನೀರಿನ ಸೆಳೆತಕ್ಕೆ
ನನಗಾರಿಲ್ಲವೆಂದು
ಮುಳುಗುತಿದ್ದೆ
ನನ್ನನ್ನೂ ಬದುಕಿಸುವ
ಮನಸೊಂದಿದೆ
ಎಂದು ಮೋಸ ಹೋಗಿ
ಕೈ ಹಿಡಿದದ್ದೇ ತಪ್ಪಾಯಿತಲ್ಲ
ನಂಬಿಕೆಗಿಂತ ಮತ್ತೊಂದು
ದೈವವಿಲ್ಲವೆಂದು ನಂಬಿದವನು
ನಾನು
ದೇವರಂತೆ ಬಂದ ನೀವೆ
ಕೊಂದಿದ್ದು ನ್ಯಾಯವೇ?



ಅಣಬೇರು
ತಾರೇಶ್ ಕೆ. ಪಿ.

# ಅಭಿವೃದ್ಧಿ ಕಾಮಗಾರಿಗಳ ಮೂಲಕ ಸ್ವಚ್ಛ ಹಾಗೂ ಸುಂದರ ನಗರ ನಿರ್ಮಿಸುವುದು ನಮ್ಮ ಗುರಿ

**ಚಿಕ್ಕಮಗಳೂರು:** ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ವಿವಿಧ ಕಾಮಗಾರಿಗಳನ್ನು ಕೈಗೊಂಡು ಸ್ವಚ್ಛ ಹಾಗೂ ಸುಂದರ ನಗರ ನಿರ್ಮಿಸುವುದು ನಮ್ಮ ಗುರಿ ಎಂದು ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ. ಜಾರ್ಜ್ ಹೇಳಿದರು.

ನಗರ ಸಭೆ ವತಿಯಿಂದ ಇಂದು ನಗರಸ ಸಭೆ ಆವರಣದಲ್ಲಿ ಆಯೋಜಿಸಿದ್ದ ನಗರಸಭೆ ವ್ಯಾಪ್ತಿಯಲ್ಲಿ 15 ನೇ ಹಣಕಾಸು ಯೋಜನೆ ಮತ್ತು ನಗರೋತ್ಥಾನ ಹಂತ-4 ರ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು

ಜಿಲ್ಲೆಯಾದ್ಯಂತ ಮಳೆಯಿಂದಾಗಿ ಅನೇಕ ರಸ್ತೆಗಳು ಹದಗೆಟ್ಟಿವೆ. ಇವುಗಳ ದುರಸ್ಥಿಗೆ ಸರ್ಕಾರದಿಂದ ವಿಶೇಷ ಅನುದಾನ ಬಿಡುಗಡೆಗೊಳಿಸಿ ಶೀಘ್ರವಾಗಿ ರಸ್ತೆ ದುರಸ್ಥಿ ಕಾರ್ಯ ಹಾಗೂ ಹೊಸ ರಸ್ತೆಗಳ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ ಎಂದರು.

ಜಿಲ್ಲೆಯು ಪ್ರವಾಸಿ ಸ್ಥಳಗಳಿಗೆ ಪ್ರಸಿದ್ಧವಾಗಿದ್ದು ಜಿಲ್ಲೆಯಲ್ಲಿರುವ ಪ್ರತಿ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವಂತೆ ಉತ್ತಮ ವ್ಯವಸ್ಥೆ ಕಲ್ಪಿಸಿ ಜಿಲ್ಲೆಯನ್ನು ಇನಷ್ಟು ಸುಂದರಗೊಳಿಸಲು ಕ್ರಮವಹಿಸಲಾಗಿದೆ ಎಂದ ಅವರು ಸಾರ್ವಜನಿಕರ ಪ್ರತಿ ಅಗತ್ಯತೆಗಳನ್ನು ಅರಿತು ಜಿಲ್ಲೆಯನ್ನು ಅಭಿವೃದ್ಧಿಗೊಳಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಡಿ. ತಮ್ಮಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿ ನಗರದ ಕತ್ರಿಮಾರಮ್ಮ ದೇವಸ್ಥಾನದಿಂದ ಬೋಳರಾಮೇಶ್ವರ ದೇವಸ್ಥಾನದವರೆಗೆ ರೂ. 50 ಲಕ್ಷ ವೆಚ್ಚದಲ್ಲಿ (ಐ.ಜಿ. ರಸ್ತೆ) ರಸ್ತೆ ವಿಭಜಕದಲ್ಲಿ 54 ಪೋಲ್‌ಗಳು, 1 ಹೈಮಾಸ್ಟ್ ಲೈಟ್ 120 ಲೈಟ್‌ಗಳು ಬೀದಿ ದೀಪಗಳನ್ನು ಅಳವಡಿಸುವುದು. ರೂ. 45 ಲಕ್ಷ ವೆಚ್ಚದಲ್ಲಿ ಬೋಳರಾಮೇಶ್ವರ ದೇವಸ್ಥಾನದಿಂದ ರಾಂಪುರದವರೆಗೆ ಡಿವೈಡರ್‌ಗೆ ಅಕ್ಟಾಗನಲ್ ಪೋಲ್, 64 ಪೋಲ್‌ಗಳು 124 ಲೈಟ್‌ಗಳು ಅಳವಡಿಸಲು. ಕಣಿವೆ ರುದ್ರೇಶ್ವರ ದೇವಸ್ಥಾನದಿಂದ ಕತ್ರಿಮಾರಮ್ಮ ದೇವಸ್ಥಾನ, ಶೃಂಗಾರ್ ಸರ್ಕಲ್, ತೊಗರಿಹಂಕಲ್ ಸರ್ಕಲ್, ನೆಲ್ಲೂರು ಗೇಟ್, ರಾಂಪುರ ಸರ್ಕಲ್ ವರೆಗೆ ರೂ. 293.23 ಲಕ್ಷ ವೆಚ್ಚದಲ್ಲಿ ಟ್ಯೂಬಲರ್ ಪೋಲ್ ಮತ್ತು ಎಲ್.ಇ.ಡಿ ಬೀದಿ ದೀಪ ಅಳವಡಿಸುವುದು. ಮತ್ತು ಚಿಕ್ಕಮಗಳೂರು ನಗರದ ವಿವಿಧೆಡೆ ಹೈಮಾಸ್ಟ್ ಮತ್ತು ಮಿನಿ ಮಾಸ್ಟ್ ಲೈಟ್, 80 ಡೆಕೋರಟೀವ್ ಪೋಲ್ ಗಳು 32 ಹೈಮಾಸ್ಟ್ ಲೈಟ್, 346 ಲೈಟ್‌ಗಳು ಅಳವಡಿಸುವ ಕಾಮಗಾರಿಗಳಿಗಾಗಿ ಇಂದು ಶಂಕು ಸ್ಥಾಪಿಸಲಾಗಿದೆ ಎಂದ ಅವರು ಈ ಕಾಮಗಾರಿಗಳನ್ನು ಗುಣಮಟ್ಟದಿಂದ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು.ನಗರಸಭಾ ಆವರಣದಲ್ಲಿನ ಉದ್ಯಾನವನದ ಸಮಗ್ರ ಅಭಿವೃದ್ಧಿಯ ಕಾಮಗಾರಿಯು (ಮ್ಯೂಸಿಕಲ್ ಫೌಂಟೆನ್ ನಿರ್ಮಾಣ ಮತ್ತು ಮ್ಯೂಸಿಕಲ್ ಫೌಂಟೆನ್ ಸುತ್ತಲೂ ಕಲ್ಪಿಸುವುದು ಹಾಗೂ ನಿರ್ಮಾಣ) ರೂ 280.50 ಲಕ್ಷ ವೆಚ್ಚದಲ್ಲಿ, ಪಾರ್ಕ್ ಅಭಿವೃದ್ಧಿ, ಪಾತ್ ವೇ ನಿರ್ಮಾಣ, ಗ್ಯಾಜಿಬೋ ನಿರ್ಮಾಣ, ಸ್ವಾಗತ ಕಮಾನು, ಮ್ಯೂಸಿಕಲ್ ಫೌಂಟೆನ್ ನಿರ್ಮಾಣ, ಆಸನ ವ್ಯವಸ್ಥೆ, ಓಪನ್ ಏರ್ ಥಿಯೇಟರ್ ಮತ್ತು ರಸ್ತೆ ಅಭಿವೃದ್ಧಿಗೊಳಿಸಲಾಗಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಹಂತ ಹಂತವಾಗಿ ನೆರವೇರಿಸಲಾಗುವುದು ಎಂದರು.



ಅವರು ಯಾವುದೇ ವ್ಯಕ್ತಿಗೆ ಅಧಿಕಾರ ಶಾಶ್ವತವಲ್ಲ ನಮ್ಮ ಶ್ರೇಷ್ಠತೆಯನ್ನು ಕಾಯಕದ ಮೂಲಕ ತಿಳಿಸಬೇಕು ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಸುಜಾತ ಶಿವಕುಮಾರ್ ಅವರು ಮಾತನಾಡಿದರು. ನಗರಸಭೆ ಪೌರಾಯುಕ್ತರು ಬಿ.ಸಿ. ಬಸವರಾಜು ಎಲ್ಲರನ್ನೂ ಸ್ವಾಗತಿಸಿದರು.,

ಕಾರ್ಯಕ್ರಮದಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹೆಚ್. ಎಸ್. ಕೀರ್ತನಾ, ಚಿಕ್ಕಮಗಳೂರು ಉಪವಿಭಾಗಾಧಿಕಾರಿ ರಶ್ಮಿ ಎಸ್. ಆರ್., ಭದ್ರಾ ಕಾಡಾ ಶಿವಮೊಗ್ಗ ಅಧ್ಯಕ್ಷರಾದ ಡಾ. ಅಂಶುಮಂತ್, ಕ.ರಾ. ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ಅಧ್ಯಕ್ಷರಾದ ಬಿ.ಹೆಚ್. ಹರೀಶ್, ನಗರಸಭೆ ಉಪಾಧ್ಯಕ್ಷೆ ಅನು ಮಧುಕರ್ ಮುಂತಾದವರು ಉಪಸ್ಥಿತರಿದ್ದರು.




Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**